ಉಪನ್ಯಾಸ ಗ್ರಂಥಮಾಲೆ

೪೦೫

ಅಂತರ್ಜಾತಿ ವಿವಾಹ

ಡಾ. ಸರೋಜಿನಿ ಚವಲಾರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಏಪ್ರಿಲ್, ೧೯೯೧

ಉಪನ್ಯಾಸ ಗ್ರಂಥಮಾಲೆ

೪೦೫

ಅಂತರ್ಜಾತಿ ವಿವಾಹ

ಡಾ. ಸರೋಜಿನಿ ಚವಲಾರ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಎಪ್ರಿಲ್, ೧೯೯೧

ಪ್ರಕಾಶಕರು :

ರು. ಮ. ಷಡಕ್ಷರಯ್ಯ

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ಏಪ್ರಿಲ್, ೧೯೯೧

೫,೦೦೦ ಪ್ರತಿಗಳು

ಬೆಲೆ ರೂ. ೧-೦೦

ಮುದ್ರಕರು :

ಜೆ. ಬಿ. ಮನ್ವಾಚಾರ

ನಿರ್ದೇಶಕರು

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದು ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೦೪ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನು ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಧಾರವಾಡ ಜಿಲ್ಲೆಯ ಇಂಗಳಗೊಂದಿ ಗ್ರಾಮದಲ್ಲಿ ಏರ್ಪಡಿಸಿದ ವ್ಯಾಸಂಗ ವಿಸ್ತರಣಾ ಉಪನ್ಯಾಸ ಶಿಬಿರದಲ್ಲಿ 'ಅಂತರ್ಜಾತಿ ವಿವಾಹ' ಕುರಿತು ಮಾತನಾಡಲು ನನಗೆ ಅವಕಾಶ ಒದಗಿತ್ತು. ಹಳ್ಳಿಯಲ್ಲಿ ಇಂಥ ವಿಷಯ ಕುರಿತು ಮಾತನಾಡಿದರೆ ಜನರ ಪ್ರತಿಕ್ರಿಯೆ ಹೇಗಿರಬಹುದೆಂದು ನನಗೆ ವಿಸ್ಮಯವಾಗಿತ್ತು.

ಅಂತರ್ಜಾತಿ ವಿವಾಹಗಳು ಇಂದು ನಮ್ಮ ಸಮಾಜದಲ್ಲಿ ಹೆಚ್ಚಾಗುತ್ತ ನಡೆದಿರುವದು ಜಾತೀಯ ಪಿಡುಗನ್ನು ಕೆಲಮಟ್ಟಿಗಾದರೂ ಹೊಡೆದೋಡಿಸುತ್ತಿರುವ ಶುಭ ಸೂಚನೆ. ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು, ಸ್ವಚ್ಛಂದತೆಯನ್ನು ನಿಯಂತ್ರಿಸಲು ಏರ್ಪಡುವ 'ವಿವಾಹ'ವೆಂಬ ಕಟ್ಟಳೆಯು ಜಾತಿಯ ಪರದೆಯ ಹಿಂದೆ ನಡೆಯುವ ನಾಟಕವಾಗಿ ಮಾರ್ಪಟ್ಟಿದೆ. ಜಾತಿ ಮತ್ತು ವಿವಾಹದ ನಿಜವಾದ ಅರ್ಥ ತಿಳಿಯದೆ ಯುವಜನಾಂಗದ ಶೋಷಣೆ ನಡೆಯುತ್ತಿದೆ. ಅದನ್ನು ತಡೆಯಲು ಸಾಧ್ಯವಾದಷ್ಟು ಪ್ರಯತ್ನ ಅಂತರ್ಜಾತಿ ವಿವಾಹದಿಂದ ನಡೆಯುತ್ತದೆ. ಮಾನವ ನಿರ್ಮಿತ ಕಟ್ಟಳೆಗಳನ್ನು ಕಾಲಕಾಲಕ್ಕೆ ತಿದ್ದಿಕೊಂಡು ನಡೆದರೆ ಅನುಕೂಲ. ಈ ದಿಶೆಯಲ್ಲಿ ಪ್ರಾಜ್ಞರು, ಸಮಾಜವಿಜ್ಞಾನಿಗಳು,

ಮುಂದಾಳುಗಳು, ಧರ್ಮಗುರುಗಳು ಸೇರಿ ಸಮಾಲೋಚಿಸುವ ಸಂದರ್ಭ ಒದಗಿರುತ್ತದೆ.

ಸಮಾಜದ ಬಗೆಗೆ ಪ್ರಾಜ್ಞ ಕಳಕಳಿಯಿಂದ ಚಿಂತಿಸುವ ನಾನು ಸ್ವಾನುಭವದಿಂದಲೂ, ವಿಷಯಾಧ್ಯಯನದಿಂದಲೂ ಈ ಕಿರುಹೊತ್ತಿಗೆಯನ್ನು ಓದುಗರ ಕೈಗೆ ಕೊಡುತ್ತಿದ್ದೇನೆ. ಕೃತಿ ರೂಪ ತಾಳಲು ಅವಕಾಶ ಒದಗಿಸಿ ಪ್ರೋತ್ಸಾಹಿಸಿದ ಶ್ರೀ ಎಸ್.ಬಿ. ನಾಯಕ ಇವರಿಗೆ ಕೃತಜ್ಞತೆಗಳು. ನನ್ನ ವಿಚಾರಗಳಿಗೆ ಪ್ರೇರಕರಾದ ಇಂಗಳಗೊಂದಿ ಗ್ರಾಮದ ಸೋದರ ಸೋದರಿಯರಿಗೆ ನನ್ನ ನೆನಪುಗಳು.

ಸರೋಜಿನಿ ಚವಲಾರ

"ಸಂಕಲ್ಪ"
ಹುಬ್ಬಳ್ಳಿ

ಪರಿವಿಡಿ

೧. ವಿವಾಹ

ಭಾರತೀಯರ ಅನಿವಾರ್ಯವೆಂದು ಅವಶ್ಯಕವೆಂದು ೕಕರಿಸಿದ ಜೀವನದ ಕೊನೆಯ ಗುರಿ ಮೋಕ್ಷ. ಗೃಹಸ್ಥಾಶ್ರಮದ ಲುವೆಯಿಂದ 'ಕಾಮ'ದನುಭವ ಪಡೆದ ಪರಿಪಕ್ವ ಮನಸ್ಸರವೇ ಮೋಕ್ಷದ ಹೆಜ್ಜೆ ಗುರುತು. ಸಾಮಾಜಿಕ ಜೀವನದ ಸುವ್ಯವಸ್ಥೆಗೆ ರ್ಣಗಳನ್ನು ಕಲ್ಪಿಸಿದಂತೆ ವ್ಯಕ್ತಿ ಜೀವನ ಸಾಧನೆಗೆ 'ಆಶ್ರಮ'ಗಳ ಪಾಲನೆ ಕಡ್ಡಾಯ. ವ್ಯಕ್ತಿಯು ಆಶ್ರಮಧರ್ಮಗಳ ಪಾಲನೆ ಯಿಂದ ಸಮಾಜ ವ್ಯವಸ್ಥೆಯು ವರ್ಣಗಳನ್ನು ಉಳಿಸಿಕೊಂಡು ಹೋಗುವದು ಕರ್ತವ್ಯ ಇದು ಭಾರತೀಯರ ಪರಂಪರೆಯ ಜೀವನದ ಮೆಟ್ಟಿಲು.

ಬ್ರಹ್ಮಚರ್ಯಾಶ್ರಮದಲ್ಲಿ ತನ್ನ ತಗುವೆಯಂತೆ ಹವಣರಿತು ವಿದ್ಯೆ ಕಲಿತು ಗುರುಕುಲದಲ್ಲಿದ್ದು ಗುರುಸೇವೆ ಸಂಘಜೀವನ ತರಬೇತಿಯೊಂದಿಗೆ ಶಿಸ್ತಿನ ತರಬೇತಿಪಡೆದು ಮುಂದಿನ ಸಾಧನೆಗೆ ದ್ಧತೆಗೆ ವ್ಯಕ್ತಿ ತೊಡಗುತ್ತಾನೆ. ಪಂಚೇಂದ್ರಿಯಗಳ ಮೇಲೆ ಹಿಡಿತ ಸಾಧಿಸಿ ದೇಹ–ಮನಸ್ಸು–ಆತ್ಮಗಳನ್ನು ಒಗ್ಗೂಡಿಸಲು ವಿದ್ಯೆಯನ್ನು ಲಿಯುವದೇ ಈ ಆಶ್ರಮದ ಸಾಧನೆ.

ಗೃಹಸ್ಥಾಶ್ರಮದ ಎರಡನೆಯ ಮೆಟ್ಟಿಲು ಏರಲು ಮೊದಲ ಹೆಜ್ಜೆ ವಿವಾಹ. ಇದರ ಗುರಿ ಧರ್ಮಪಾಲನೆ, ವಂಶಾಭಿವೃದ್ಧಿ ಮತ್ತು ಕಾಮತೃಪ್ತಿ. ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ

ಗಳಿಗೆ ಮೂಲ, ಪತಿ–ಪತ್ನಿ–ಈ ಸಂಬಂಧಪ್ರಾಪ್ತಿ ವಿವಾಹದಿಂದ.

ವಿವಾಹದ ಅರ್ಥ–ಮಹತ್ವ :

ವಿವಾಹ ಶಬ್ದವು 'ವಿ' ಮತ್ತು 'ವಾಹ' ಶಬ್ದಗಳಿಂದ ಸಂಲಗ್ನ 'ವಿ' ಎಂದರೆ ಹೋಗು. 'ವಾಹ' ವೆಂದರೆ ಹೊತ್ತುಕೊಂಡು ಹೋಗು ಮಹಿಳೆಯ ಮನೆಯಲ್ಲಿ ನಡೆಯುತ್ತಿದ್ದ ಮದುವೆಯ ನಂತರ ಪುರುಷನು ಹೆಂಡತಿಯನ್ನು ಹೊತ್ತುಕೊಂಡು ಇಲ್ಲವೆ ಪಲ್ಲಕ್ಕಿಯಲ್ಲಿ ಕರೆದು ಕೊಂಡು ಹೋಗುವ ಕಾಲದ ಈ ಪದವು ಭಾರತೀಯ ಸಂಸ್ಕೃತಿ ವಾಹಕವೂ ಹೌದು, ಮಾನವನ ನಾಗರಿಕತೆಯ ಕುರುಹೂ ಹೌದು.

ಮೆಕ್ಲಿಂಗ ಲೀ ಎಂಬ ಸಮಾಜವಿಜ್ಞಾನಿಯು ಹೇಳಿಕೆಯಂತೆ "ಸ್ತ್ರೀಪುರುಷರು ನಿಶ್ಚಿತಪಡಿಸಿದ ನಿಯಮಗಳ ಅನುಗುಣವಾಗಿ ಸಾರ್ವಜನಿಕರ ಸಮಕ್ಷಮದಲ್ಲಿ ಜೊತೆಗೂಡಿ ಸತಿಪತಿಯರಾಗಿ ಮಾರ್ಪಾಡು ಹೊಂದುವದು ವಿವಾಹ".

ಗಿಲಿನ್ ಮತ್ತು ಗಿಲಿನ್ ಎಂಬ ಸಮಾಜವಿಜ್ಞಾನಿಗಳ ಪ್ರಕಾರ ಪ್ರಜೋತ್ಪಾದನ ಕ್ರಿಯೆಗಾಗಿ ಕುಟುಂಬವನ್ನು ಕಟ್ಟಲು ಸಮಾಜದಿಂದ ಪಡೆಯುವ ಮನ್ನಣೆಯು 'ವಿವಾಹ' ವೆಂದೆನಿಸಿಕೊಳ್ಳುತ್ತದೆ.

ಹಿಂದೂ ಧರ್ಮಸೂತ್ರಕಾರನಾದ ಮನುವಿನ ತಿಳುವಳಿಕೆಯಂತೆ "ಸ್ತ್ರೀಪುರುಷರು ಸತಿಪತಿಯರಾಗಲು ಸಮಾಜದಿಂದ ಪಡೆದ ಮನ್ನಣೆ"ಯೇ ವಿವಾಹ.

ಇಲ್ಲಿಯವರೆಗೆ ನೋಡಿದ ಪಂಡಿತರ ಈ ಅಭಿಪ್ರಾಯಗಳು
ವಾಹದ ಸಂಪೂರ್ಣ ಅರ್ಥವನ್ನು ಕೊಡಲು ಅಸಮರ್ಥ.
ದರೂ ಈ ಎಲ್ಲರ ನಿರ್ದೇಶನವು ವಿವಾಹದ ಮೂಲೋದ್ದೇಶ
ದ ಮನುಷ್ಯನ ಲೈಂಗಿಕ ಬಯಕೆ ಈಡೇರಿಕೆಯ ಕಡೆಗೆ. ತತ್ಪರಿ
ಣಾಮವಾದ ಸಂತಾನೋತ್ಪತ್ತಿಯ ಕಡೆಗೆ ಇರುವುದು ಸ್ಪಷ್ಟ.

ಸಾಮಾಜಿಕರ ಕಾಮಜೀವನ ಸುವ್ಯವಸ್ಥೆ. ವಂಶಾಭಿವೃದ್ಧಿ.
ಸ್ಕೃತಿಯ ಪೋಷಣೆ–ಹೀಗೆ ಮುಖ್ಯ ವಿವಾಹಿತ ಸ್ತ್ರೀ ಪುರುಷರ
ೀವನ ಪೋಷಕ ಮತ್ತು ಆವಶ್ಯಕವಾದುದು ವಿವಾಹ ವೆಂಬ ಸಂಸ್ಥೆ.
ಟುಂಬ ರಚನೆಯ ಬುನಾದಿ ವಿವಾಹ. ವಿವಾಹ ಮತ್ತು
ಟುಂಬ ವ್ಯವಸ್ಥೆಯು ಸುಸಂಸ್ಕೃತ ಸಮಾಜದ ಪೂರಕ ಅಂಶಗಳು.
ಲ್ಲ ಕಾಲದ ವರ್ಣದವರಿಗೂ ಸಾರ್ವತ್ರಿಕವಾದ ಸಂಸ್ಥೆ ವಿವಾಹ.
ದು ಒಂದಿಲ್ಲೊಂದು ವಿಧದಿಂದ ಎಲ್ಲ ಸಮಾಜದವರಿಂದಲೂ
ನುಸರಿಸಲ್ಪಟ್ಟಿದೆ. ಇದು ಮನುಷ್ಯರಲ್ಲಿ ಧಾರ್ಮಿಕ ವ್ಯವಸ್ಥೆ
ಲೆವೆತ್ತುವ ಮೊದಲೆ ಪ್ರಚಲಿತವಾದ ಪದ್ಧತಿಯೆಂದು ತಿಳಿದು
ರುತ್ತದೆ. ಜನನ–ಬಾಲ್ಯ–ಯೌವನ–ಮುಪ್ಪು ಗಳಂತೆ ವಿವಾಹವು
ನುಷ್ಯ ಜೀವನಕ್ಕೆ ಅನಿವಾರ್ಯ ಅಂಗವೆಂದು ಸ್ವೀಕೃತ.

ಪಿತೃಋಣಸಂದಾಯಕ್ಕೆ ಹಿಂದುಗಳಿಗೆ ಪುತ್ರಪ್ರಾಪ್ತಿ–ಅದರ
ನ್ನೆಲೆಗೆ ವಿವಾಹವು ಧಾರ್ಮಿಕ ವಿಧಾನವಾಗಿ ಅನುಕೃತ. ಚೀನ
ಪಾನ ದೇಶಗಳಲ್ಲಿ ಕೂಡ ಬ್ರಹ್ಮಚರ್ಯವು ಖಂಡನೀಯ. ಅವಿ-
ವಾಹಿತನು ಅರ್ಧಮನುಷ್ಯನೆಂದು ಪರಿಗಣಿಸಲ್ಪಡುತ್ತಾನೆ.

೨. ವಿವಾಹ ಸಂಸ್ಕಾರ

ಧಾರ್ಮಿಕ ಬಂಧನವಾದ ವಿವಾಹವು ಜನ್ಮಾಂತರದ ಜೋಡು ಎಂದೂ, ದೈವನಿರ್ಣೀತವೆಂದೂ, ಸ್ವರ್ಗದಲ್ಲಿ ನಿರ್ಧರಿತವೆಂದೂ ನಂಬ ಲಾಗಿದೆ. ಹಿಂದೂ ಧರ್ಮದಲ್ಲಿ ಜನಿಸಿದ ಮನುಷ್ಯನು ತಾಯಿಯ ಗರ್ಭದಲ್ಲಿದ್ದಾಗಿನಿಂದ ಸಂಸ್ಕಾರಕ್ಕೊಳಗಾಗುತ್ತಾನೆ. ಜನನ–ನಾಮಕರಣ–ಉಪನಯನ–ವಿವಾಹ–ಮರಣಗಳಂಥ ಪ್ರಾಕೃತಿಕ, ಅಪ್ರಾಕೃತಿಕ ವಿಷಯಗಳೆಲ್ಲವೂ ಒಂದೊಂದು ಸಂಸ್ಕಾರಗಳಿಗೆ ಬದ್ಧವಾಗಿ ನಡೆಯುತ್ತವೆ.

ಕೆಲವು ಸಮಾಜ ಶಾಸ್ತ್ರಜ್ಞರು ಹೆಣ್ಣು ಮತ್ತು ಗಂಡು ಪ್ರಾಪ್ತ ವಯಸ್ಕರಾದಾಗ ಹೆಣ್ಣನ್ನು ಶುದ್ಧೀಕರಿಸುವ ಸಾಧನ ವಿವಾಹವೆಂದೂ. ಹೆಣ್ಣು ಇದೊಂದೇ ಸಂಸ್ಕಾರಕ್ಕೆ ಒಳಗಾಗುವಳೆಂದೂ ನಂಬುತ್ತಾರೆ. ಈ ನಂಬಿಗೆ ವರ್ಣಾಶ್ರಮಧರ್ಮವನ್ನು ಎತ್ತಿ ಹಿಡಿಯುವ ಅಭಿಪ್ರಾಯ ಮಾತ್ರ. ಬಸವಾದಿ ಪ್ರಮಥರು. ಪೂರ್ವ ಶೈವ ಸಂಪ್ರದಾಯದವರು, ಮಾತೃಪ್ರಧಾನ ಕುಟುಂಬದವರು ಧಾರ್ಮಿಕ ವಿಧಾನ, ಸಂಸ್ಕಾರಾದಿ ಕ್ರಿಯೆಗಳಿಗೆ ಸ್ತ್ರೀಪುರುಷರೆಂಬ ಲಿಂಗಭೇದವೆಣಿಸಿದ್ದು ಕಂಡು ಬರುವದಿಲ್ಲ.

ವರ್ಣಾಶ್ರಮಧರ್ಮಗಳಲ್ಲಿ ಸ್ತ್ರೀ. ಧರ್ಮೋದ್ಧಾರಕ್ಕೆ ಸಾಧನ ಮಾತ್ರ. ಆದರ ಸಿದ್ಧಿಯಾದ ಮೋಕ್ಷಕ್ಕೆ ಭಾಜನನಾಗುವವನು

ಪುರುಷ ಮಾತ್ರ. ಸ್ತ್ರೀ, ಪುರುಷನ ಸಹಧರ್ಮಿಣಿ—ಎನ್ನುವುದು ಜೀವನದುದ್ದಕ್ಕೂ ಜೊತೆಗೆ ಹೆಜ್ಜೆ ಹಾಕುವುದಕ್ಕೆ ಸೀಮಿತ. ಧಾರ್ಮಿಕ ಚಟುವಟಿಕೆಗಳಲ್ಲಿ ಸಹಾಯ ಮಾಡಲು ಸ್ತ್ರೀಯ ಅವಶ್ಯಕತೆ. ವಿವಾಹವಿಲ್ಲದೆ ಪುತ್ರನನ್ನು ಪಡೆಯುವಂತಿಲ್ಲ. ಪುತ್ರನಿಲ್ಲದೆ ಮುಕ್ತಿ ಲಭಿಸುವುದಿಲ್ಲವೆಂಬುದೇ ಹಿಂದುಗಳ ಅಭಿಪ್ರಾಯ. ಸ್ತ್ರೀಯರಿಗೆ ವಿವಾಹವಾಗದಿದ್ದರೆ ಮುಕ್ತಿ ಇಲ್ಲ ಎಂಬುದನ್ನು ರೂಪಿಸಲು ಗಾರ್ಗಿಯನ್ನು ಉದಾಹರಿಸುವುದು.*

ವಿವಾಹಕಾಲದಲ್ಲಿ ಕನ್ಯಾದಾನ, ವಿವಾಹ ಹೋಮ, ಪಾಣಿಗ್ರಹಣ, ಲಾಜಾಹೋಮ, ಅಗ್ನಿಪರಿಣಯನ ಅಶ್ಮಾರೋಹಣ ಮತ್ತು ಸಪ್ತಪದಿಯಂಥ ಧಾರ್ಮಿಕ ನಿಯಮಾಚರಣೆಯನ್ನು ಅನುಸರಿಸಬೇಕಾಗುತ್ತದೆ. ಅಗ್ನಿ ಮತ್ತು ಮಂತ್ರಗಳ ಸಹಾಯದಿಂದಲೇ ವಿವಾಹ ಸಂಪೂರ್ಣವಾಗಬೇಕಾತ್ತದೆ.

ಆರ್ಯವರ್ಣದವರು ಬರುವ ಮೊದಲೇ ದ್ರಾವಿಡ ಜನಾಂಗದವರು ಭಾರತದಲ್ಲಿ ವಾಸಿಸಿದ್ದು, ನಾಗರಿಕ ಜೀವನ ನಡೆಸಿದ್ದು ಐತಿಹಾಸಿಕ ಸತ್ಯ. ದಸ್ಯು ವರ್ಣದವರೆಂದು ಕರೆಸಿಕೊಂಡು, ಆರ್ಯವರ್ಣದವರಿಗೆ ದಾಸರಾಗಿ ಬದುಕುವ ಅನಿವಾರ್ಯತೆ ದ್ರಾವಿಡರಿಗೆ

---

* ಋಷಿ ಗರ್ಗರ ಮಗಳು ಗಾರ್ಗಿ ತನಗೆ ಅನುರೂಪ ವರ ದೊರೆಯಲಿಲ್ಲವೆಂದು ಮದುವೆಯಾಗದೆ ಉಳಿದಾಗ ನಾರದರು "ವಿವಾಹವಾಗದೆ ನಿನಗೆ ಮೋಕ್ಷವಿಲ್ಲ"ವೆಂದು ಅವಳನ್ನು ಎಚ್ಚರಿಸುತ್ತಾರೆ. ಆಗ ಅವಳು ಶೃಂಗವತ್ ಎಂಬ ಋಷಿಯನ್ನು ವಿವಾಹವಾಗಿ ನಂತರ ಮೋಕ್ಷ ಹೊಂದುತ್ತಾಳೆ.

ಬಂದದ್ದು, ಇವರ ಆಚಾರಗಳಲ್ಲಿ ಅಲ್ಪ ವ್ಯತ್ಯಾಸಗಳು ತಲೆದೋರಿದ್ದು. ಮೂಲ ಪರಂಪರೆಯನ್ನು ಕೆಲಮಟ್ಟಿಗಾದರೂ ಮರೆಮಾಡಿರಲೇ ಬೇಕು. ಆದರೂ ಇವರಲ್ಲಿ ಹಲವಾರು ಪಂಗಡಗಳಲ್ಲಿ ವಿವಾಹ ಪದ್ಧತಿಯ ಕೆಲವು ಅಂಶಗಳಾದರೂ ಸಮಾನ ಗುಣಧರ್ಮದಿಂದ ಕೂಡಿರುತ್ತವೆ. ಸಂಪ್ರದಾಯಬದ್ಧವಾದ ಕೆಲವು ವಿಧಾನಗಳನ್ನು ಶೈವಪಂಗಡಗಳಲ್ಲಿ ಕೆಳಗಿನಂತೆ ಗುರುತಿಸಬಹುದು.

ವಿವಾಹ ವಿಧಾನದಲ್ಲಿ ಕನ್ಯಾವಾಗ್ದಾನ ವಿಧಿ ಮೊದಲ ಕಾರ್ಯ. ಇಲ್ಲಿ ವಧು ಮತ್ತು ವರನ ಕಡೆಯವರ ವಾಗ್ದಾನವು 'ಸಾಕ್ಷಿವೀಳ್ಯ'ಯನ್ನು ಕೊಡುವದು ಪಡೆಯುವದರೊಂದಿಗೆ ನಡೆಯುತ್ತದೆ. ಮುಂದೆ ಲಗ್ನಪತ್ರ, ಹಂದರಸ್ತಂಭ ಸ್ಥಾಪನೆಯು ಕನಿಷ್ಠ ನಾಲ್ಕು ದಿನ ಗರಿಷ್ಠ ೧೦ ದಿನ ಮೊದಲು ನಡೆಯುತ್ತದೆ. ಮದುವೆಗೆ ೩ ಅಥವಾ ೫ ದಿನಗಳ ಮೊದಲು ಹರಿದ್ರಾಲೇಪನ ಕಾರ್ಯ ನಡೆದು ಆಗ ಮದುಮಕ್ಕಳಿಗೆ ಗುರುಪಾದೋದಕ ಕೊಡಿಸುತ್ತಾರೆ. ನಂತರ ಗುರುದೇವತಾಕಾರ್ಯವೆಂದು ಪಾರ್ವತಿ ಪರಮೇಶ್ವರರ ಪ್ರೀತ್ಯರ್ಥವಾಗಿ ಗುರುಗಳನ್ನು, ಗಣಾಧೀಶ್ವರರನ್ನು ಭೋಜನದಿಂದ ತೃಪ್ತಿಪಡಿಸಿ ಕುಲದೇವರ ಪೂಜೆಯ ನಂತರ ಗುಗ್ಗಳ ಕಾರ್ಯವಧುವರರು ಮಾಡುತ್ತಾರೆ. ಅಂಕುರಾರೋಪಣ, ವಿವಾಹ ಮಂಟಪ ಸ್ಥಾಪನೆಯಾದ ಮೇಲೆ ಪಂಚಕಲಶ ಸ್ಥಾಪನೆಯಾಗಿ, ಪುಣ್ಯಾಹವಾಚನ, ನಾಂದೀ ಸಮಾರಂಭವಾಗಿ ಗಣಪತಿಪೂಜಾ, ಗೌರೀ ಪೂಜಾ, ವಿವಾಹಮಂಟಪಪೂಜಾ, ಪಂಚಕಲಶ ಪೂಜಾದಿಗಳು ಅನುಕ್ರಮವಾಗಿ ನಡೆಯುತ್ತವೆ. ವಧು-ವರರಿಗೆ ಪಂಚಕಲಶದಲ್ಲಿ ಗುರು ಕಲಶದಿಂದ ಸೂತ್ರವನ್ನು ಕೊಟ್ಟನಂತರ ನವಕರ್ಮಗಳು

ಜರುಗುತ್ತವೆ. ಅವು ಯಾವುವೆಂದರೆ: ಕಂಕಣ ಧಾರಣ ಕಾರ್ಯ, ಗುಡಜೀರಕ ಕಾರ್ಯ, ಮಾಂಗಲ್ಯ ಧಾರಣ ಕಾರ್ಯ, ಅಷ್ಟಕ್ಷೀರಕ ಕಾರ್ಯ, ಪಾದ ಸಂಘಟನ ಕಾರ್ಯ, ಅಕ್ಷತಾರೋಪಣ ಕಾರ್ಯ, ನಾಸಿಕಾಭೂಷಣಕಾರ್ಯ, ನಾರಿಕೇಳ (ಫಲದಾನ) ಕಾರ್ಯ, ಧಾತುಬದ್ಧ ಕಾರ್ಯ, ಅರುಂಧತಿದರ್ಶನ ಕಾರ್ಯದೊಂದಿಗೆ ವಿವಾಹ ಕಾರ್ಯ ಮುಗಿಯುತ್ತದೆ. ಇವೆಲ್ಲ ವಿಧಾನಗಳನ್ನು ಸಂಕ್ಷಿಪ್ತವಾಗಿಯಾದರೂ ಶಿವಪೂಜಕರಾದ ಶೈವ, ವೀರಶೈವ ಪಂಗಡಗಳು ಈಗಲೂ ಆಚರಿಸುತ್ತವೆ.

'ಧರ್ಮ'ವನ್ನು ಆಚರಿಸುವದೆಂದರೆ ಪರ್ವತವನ್ನು ಹೊತ್ತು ನಿಂತಂತೆ ಎಂದಲ್ಲ. ನಿತ್ಯ ಬಳಕೆಯಲ್ಲಿ ತರುವಂಥ ನೀತಿಯ ತತ್ವಗಳನ್ನು ಅಡಕಮಾಡಿಕೊಂಡಿರುವದೇ ಧರ್ಮ. ವಿಜ್ಞಾನವನ್ನು ಹಳಿದು ತ್ಯಜಿಸುವದನ್ನಾಗಲಿ ಅನ್ಯರನ್ನು ದೂಷಿಸುವದಾಗಲೀ ಯಾವದೇ ಧರ್ಮದಲ್ಲಿ ಹೇಳಿಲ್ಲ. ಸರ್ವೋತ್ಕೃಷ್ಟತೆಯನ್ನು, ಮಾನವತ್ವವನ್ನು ಪಡೆಯಬೇಕಾದ ನೀತಿ ಮಾರ್ಗದ ಸೋಪಾನಗಳ ವಿಧಾಯಕ ಆರೋಹಣವನ್ನು ಬೋಧಿಸುವದೇ ಧರ್ಮ. ಧಾರ್ಮಿಕ ಸಂಸ್ಕಾರದ ರೂಪಗಳು ಬೇರೆ ಬೇರೆಯಾಗಿದ್ದರೂ ತತ್ವಗಳು ಒಂದೇಯಾಗಿರುವಂತೆ ವಿವಾಹದ ಸಂಸ್ಕಾರಗಳು ಬೇರೆಯಾಗಿದ್ದರೂ ವಿವಾಹ ನಂತರ ದಂಪತಿಗಳಿಗೆ ಉತ್ತರೋತ್ತರ ಕಲ್ಯಾಣವಾಗಲೆಂಬ ತತ್ವವು ಒಂದೇಯಾಗಿರುತ್ತದೆ.

ವೀರಶೈವರು ವಿವಾಹ ದೀಕ್ಷೆಯ ಧಾರ್ಮಿಕ ಸಂಸ್ಕಾರ ವಿಧಾನಗಳಿಂದ ಸ್ಥೂಲದೇಹದಲ್ಲಿದ್ದ ಮಾತಾಪಿತೃಗಳಿಂದ ಉದ್ಭವಿಸಿದ

ಗರ್ಭದೋಷ, ಸ್ತನ್ಯಪಾನದೋಷ. ಸಹಭೋಜನದೋಷ. ಮೋಹದೋಷ ಮೊದಲಾದವುಗಳನ್ನು ನಿವಾರಿಸಿ ಕೊಂಡು ಅಂತರಾತ್ಮನು ಶುದ್ಧನಾಗುತ್ತಾನೆಂದು ನಂಬುತ್ತಾರೆ. ಧಾರ್ಮಿಕ ಸಂಸ್ಕಾರಗಳಿಂದ ಸ್ಥೂಲದೇಹ ಪವಿತ್ರವಾಗದೆ ಅಂತರಾತ್ಮನು ಎಂದೂ ಪರಿಶುದ್ಧನಾಗುವದಿಲ್ಲ. ಬಹಿರವ್ಯಾವರಣಗಳ ಶುದ್ಧಿಯಿಂದ ಅಂತರವ್ಯಾವರಣ ಶುದ್ಧಿಯಾಗುವದೆಂದು ತಿಳಿದು ಆಚರಿಸುತ್ತಾರೆ.

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯ
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ
ನಾಳಿನದಿನಕಿಂದಿನದಿನ ಲೇಸೆಂದು ಹೇಳಿರಯ್ಯ
ಕೂಡಲ ಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ ।

ಬಸವಣ್ಣನವರು ಹೇಳಿದ ಮೇಲಿನ ವಚನವು ವಿವಾಹ ಸಂಸ್ಕಾರದ ಹಿಂದಿನ ಸರಳತೆಯನ್ನು ಎತ್ತಿಹೇಳುತ್ತದೆ. ಸಂಸ್ಕಾರಗಳು ಮನುಷ್ಯ ನಿರ್ಮಿತವಾಗಿದ್ದು ಅವನ ಮನಃಸಂತುಷ್ಟಿಗಾಗಿ ಪೂರಕವಾಗಿರಬೇಕೇ ಹೊರತು ಮನಃಕ್ಲೇಶವಾಗಬಾರದೆಂದೇ ಉದ್ದೇಶಿತ. ಒಟ್ಟಾರೆ ದ್ರಾವಿಡ ಸಂಪ್ರದಾಯ ಮೂಲದಿಂದ ಅನೇಕ ಪಂಗಡಗಳು ಒಡೆದು ಹೋಗಿ ಸಂಪ್ರದಾಯಗಳಲ್ಲಿ ವ್ಯತ್ಯಾಸಮೂಡಿರುವ ಸಂಭವ ಹೆಚ್ಚಾಗಿದೆ. ಈ ಸಂಪ್ರದಾಯದ ಪುರಾತನತ್ವ, ಅರ್ಥ ಸಂಬಂಧಗಳ ಮಹತ್ವವನ್ನು ಕುರಿತು ಹಿಂದೂ ಸಮಾಜದ ಸಮಾಜ ವಿಜ್ಞಾನಿಗಳು ಕಡೆಗಣಿಸಿರುವದು ಆಶ್ಚರ್ಯದ ವಿಷಯ! ಇತಿಹಾ

ಕ ಸತ್ಯವಾದ ದ್ರಾವಿಡ ಜನಾಂಗದ ಪೂರ್ವಪರಂಪರೆ. ಆದರೆ ತತ್ಸಂಬಂಧದ ವಿಚಾರ ಪ್ರತಿಪಾದನೆಯತ್ತ ಸಮಾಜ ವಿಜ್ಞಾನಿಗಳು ತೋರುತ್ತಿರುವ ದಿವ್ಯನಿರ್ಲಕ್ಷ್ಯ ಅಕ್ಷಮ್ಯವಲ್ಲವೇ?

ಹಿಂದೂ ಧರ್ಮದಲ್ಲಿ ಮೂರು ರೀತಿಯ ಋಣಸಂದಾಯವನ್ನು ಒಪ್ಪುತ್ತಾರೆ: ದೈವಋಣ, ಪಿತೃಋಣ, ಗುರುಋಣವೆಂದು. ಯಜ್ಞಯಾಗಾದಿಗಳಿಂದ ದೈವ ಋಣ, ವಿವಾಹವಾಗಿ ಗಂಡು ಮಗನನ್ನು ಪಡೆದು ಪಿತೃಋಣ, ವೇದಾಧ್ಯಯನದಿಂದ ಗುರುಋಣವನ್ನು ನೀಗಿಕೊಳ್ಳಬೇಕಾಗುತ್ತದೆ. ವ್ಯಕ್ತಿಗೆ ಮಾತೃಋಣವೇ ಮುಖ್ಯವಾಗಿದ್ದರೂ ಅದಕ್ಕೆ ಪ್ರತ್ಯೇಕ ಕ್ರಿಯಾಚರಣೆ ಇಲ್ಲ. ಪಿತೃಋಣದಲ್ಲಿ ಸಮಾವೇಶಗೊಂಡಿದೆಯೆಂದು ಅರ್ಥೈಸಬೇಕು. ಮಾತೃದೇವೋಭವವೆಂದು ಹೇಳುವದರಲ್ಲಿ ಅದೇ ನ್ಯಾಯ ಕಾಣುತ್ತದೆ.

ಹಿಂದೂ ವಿವಾಹದಲ್ಲಿ ವಿವಾಹ ವಿಚ್ಛೇದನಕ್ಕೆ ಆಸ್ಪದವಿಲ್ಲ. ಭಾವನಾತ್ಮಕ ಸಂಬಂಧವನ್ನು ದೈಹಿಕಕ್ರಿಯೆಯಾಗಿಸಿ ಹಲವು ತೊಡಕಿಗೆ ಕಾರಣವಾಗಿದೆ. ಪತಿ ಪತ್ನಿಯರಲ್ಲಿ ಒಬ್ಬರು ಸಾಯುವವರೆಗೆ ಸಂಬಂಧ ಸ್ಥಿರವಾಗಿರಬೇಕು. ಹೆಂಡತಿ ಸತ್ತರೆ ಗಂಡ ಮರುಮದುವೆಯಾಗಬಹುದು. ಹೆಣ್ಣಿಗೆ ಗಂಡ ಸತ್ತಮೇಲೆಯೂ ವಿಧವೆಯಾಗಿ ಸತ್ತಗಂಡನಿಗೆ ನಿಷ್ಠೆಯಿಂದಿರಬೇಕೆಂದೇ ಬಯಸುತ್ತಾರೆ.

೩. ವಿವಾಹದ ಪ್ರಕಾರಗಳು

ಏಕಪತ್ನಿತ್ವ, ಬಹುಪತ್ನಿತ್ವ, ಬಹುಪತಿತ್ವ, ಸಾಮೂಹಿಕ ವಿವಾಹಗಳೆಂದು ಕರೆಸಿಕೊಳ್ಳುವ ವಿವಾಹ ವಿಧಾನಗಳೆಲ್ಲವೂ ಹೆಣ್ಣು–ಗಂಡಿನ ಸಂಖ್ಯೆಯ ಮೇಲೆ ಅವಲಂಬಿತ. ಹಿಂದೂ ವಿವಾಹ ವಿಧಾನಗಳು ಮಾತ್ರ ಗುಣಧರ್ಮವನ್ನವಲಂಬಿತ.

ಬ್ರಹ್ಮವಿವಾಹ. ದೈವವಿವಾಹ. ಆರ್ಷವಿವಾಹ. ಪ್ರಜಾಪತ್ಯ ವಿವಾಹ. ಗಂಧರ್ವವಿವಾಹ. ಅಸುರವಿವಾಹ. ರಾಕ್ಷಸವಿವಾಹ ಮತ್ತು ಪೈಶಾಚವಿವಾಹಗಳೆಂದು ಎಂಟು ಪ್ರಕಾರಗಳನ್ನು ಮನುಸ್ಮೃತಿ. ಗೃಹ್ಯಸೂತ್ರ ಮತ್ತು ಧರ್ಮಸೂತ್ರಗಳು ಒಪ್ಪುತ್ತವೆ. ಈ ವಿಧಾನಗಳಲ್ಲಿ ಬ್ರಹ್ಮವಿವಾಹ. ದೈವವಿವಾಹಗಳೆರಡು ಹೆಚ್ಚು ಬಳಕೆಯಲ್ಲಿದ್ದು ಉಳಿದವುಗಳು ಅನಾಗರಿಕವೆಂದು ಗಣಿಸಲ್ಪಟ್ಟು ಅನಾದರಣೆಗೊಳಗಾಗಿದ್ದವು.

ಕಾಲಕ್ರಮದಲ್ಲಿ ವಿವಾಹವು ಒಂದು ಒಡಂಬಡಿಕೆಯಾ
ಮಾರ್ಪಟ್ಟು ಲೌಕಿಕ ಜೀವನದ ಅನುಕೂಲವೇ ಅದರ ಗು
ಯೆಂದು ಸ್ವೀಕೃತವಾಗಿರುತ್ತದೆ. ಮೊದಲಿನಂತೆ ವಿವಾಹ
ಮೋಕ್ಷಸಾಧನೆಯ ಗುರಿಯಾಗಿ ಉಳಿಯಲಿಲ್ಲ; ಮೋಕ್ಷ ಸಾಧನೆಯ
ಜೀವನದ ಗುರಿಯಾಗಿಯೂ ಉಳಿಯಲಿಲ್ಲ. ಸಾಂಪ್ರದಾಯಿ
ಮದುವೆಗಳಲ್ಲಿರುವ ಕೆಲವು ದೋಷಗಳು ಅನುಚಿತವಾಗಿಯ

ನಾನುಕೂಲವಾಗಿಯೂ ಮಾರ್ಪಟ್ಟ ಕಾರಣ ಹೊಸ ದಾರಿಯನ್ನು ಹುಡುಕುವ ಅನಿವಾರ್ಯವೇರ್ಪಟ್ಟಿತು. ಅವುಗಳಲ್ಲಿ ಅಂತರ್ಜಾತಿಯ ವಿವಾಹವು ಒಂದು.

ಇಂದಿನ ಪರಿಸರದಲ್ಲಿ ಎಲ್ಲ ಕ್ಷೇತ್ರಗಳಂತೆ ವಿವಾಹದಲ್ಲಿಯೂ ಲವು ಬದಲಾವಣೆಯ ಅಗತ್ಯ ಕಂಡಿದೆ. ಪ್ರಗತಿಪರ ಮುಂದಾಳುಳು, ಮಾನವಕುಲ ಚಿಂತಕರು ಇಚ್ಛಿಸಿದಂತೆ ಹೊಸ ಪದ್ಧತಿಯ ವಾಹಗಳನ್ನು ಪ್ರೋತ್ಸಾಹಿಸಲು ಕಾನೂನು ಬೆಂಬಲಕೊಟ್ಟಿತು. ೧೮೭೨ರಲ್ಲಿ ಜಾರಿಗೆ ಬಂದ ವಿಶೇಷ ಹಿಂದೂ ವಿವಾಹ ಕಾಯ್ದೆಯನ್ವಯ ಲೌಕಿಕ ವಿವಾಹದಲ್ಲಿ ಸಗೋತ್ರ, ಸ್ವಜಾತಿಯ ನಿರ್ಬಂಧವನ್ನು ತೆಗೆದುಹಾಕಲಾಯಿತು. ೧೯೫೪ರಲ್ಲಿ ಜಾರಿಗೆ ಬಂದ ಕಾಯ್ದೆಯಂತೆ ವಿವಿಧ ಧರ್ಮಕ್ಕೆ ಸಂಬಂಧಿಸಿದವರು ವಿವಾಹವಾಗುವ ಸ್ವಾತಂತ್ರ್ಯವಿದೆ. ೧೯೪೯ರಲ್ಲಿ ಜಾರಿಗೆ ಬಂದಿರುವ ವಿವಾಹ ಕಾಯ್ದೆಯಂತೆ ಹಿಂದೂ ವಿವಾಹಗಳ ಅಸಾಧುತ್ವ ನಿವಾರಣಾ ಕಾಯ್ದೆಯು ಜಾತಿ, ಉಪಜಾತಿ, ಸಗೋತ್ರ, ಸಪ್ರವರ, ಸಪಿಂಡ ವಿವಾಹಗಳನ್ನು ಮನ್ನಿಸುತ್ತದೆ. ಧಾರ್ಮಿಕ ವಿವಾಹಗಳನ್ನು ಪ್ರತಿಬಂಧಿಸದೇ ಇದ್ದರೂ ಸರಕಾರವು ಜಾತಿ, ಉಪಜಾತಿ, ಸಗೋತ್ರ, ಸಪ್ರವರ, ಸಂಪಿಡ ವಿವಾಹಗಳನ್ನು ಮನ್ನಿಸುತ್ತದೆ. ೧೯೫೫ರಲ್ಲಿ ಜಾರಿಯಲ್ಲಿ ಬಂದ ಹಿಂದೂ ಕಾಯ್ದೆಯು ಎಲ್ಲ ಜಾತಿ–ಮತ–ಪಂಥದವರು ಲೌಕಿಕ ವಿವಾಹವಾಗಲು ಮನ್ನಣೆ ಕೊಟ್ಟಿರುತ್ತದೆ..

೪. ಧರ್ಮ ಮತ್ತು ಜಾತಿ

ಚಾತುರ್ವರ್ಣ ಪದ್ಧತಿಯು ಭಾರತದಲ್ಲಿ ತಲೆದೋರುವ ಮೊದಲು ಆರ್ಯವರ್ಣ ದಾಸವರ್ಣವೆಂದು ಗುರುತಿಸಿದ್ದು ತಿಳಿಯುತ್ತದೆ. ಈ ಎರಡು ಗುಂಪುಗಳಲ್ಲಿ ಭಾಷೆ ಧಾರ್ಮಿಕ ಪದ್ಧತಿಗಳ ಭಿನ್ನತೆ. ಬಣ್ಣ ಮತ್ತು ಶಾರೀರಿಕ ರಚನೆಯಲ್ಲಿಯೂ ಭಿನ್ನತೆ ಇರುವದು ವೇದಗಳಿಂದಲೂ ತಿಳಿದು ಬರುತ್ತದೆ. ಇದೇ ಕಾಲದಲ್ಲಿ ಆರ್ಯವರ್ಣಕ್ಕೆ ಉಚ್ಚ ಸ್ಥಾನವನ್ನು ದಾಸವರ್ಣಕ್ಕೆ ಕೆಳಗಿನ ಸ್ಥಾನವನ್ನು ಕೊಟ್ಟಿದ್ದಾರೆ. ಇಂಥ ಸ್ಥಾನ ಭಿನ್ನತೆಗೆ ಜನಾಂಗ ಮತ್ತು ಶಾರೀರಿಕ ರಚನೆಯ ವೈವಿಧ್ಯ ಕಾರಣವಾಗಿತ್ತು. ಜನ್ಮದ ಮೂಲಕ ಗುಂಪುಗಳ ಹೆಸರು ಶಾಶ್ವತವಾಗಿ, ಮುಂದೆ ಗುಂಪುಗಳು ಜಾತಿಗಳಾಗಿ ಮಾರ್ಪಟ್ಟಿರಬೇಕು. ವರ್ಣ ಪದ್ಧತಿಯ ವರ್ಗಗಳು ಮೊದಲು ವೃತ್ತಿಯನ್ನು ಅವಲಂಬಿಸಿದ್ದು ನಂತರ ಜನ್ಮದ ಮೇಲೆ ಅವಲಂಬಿತವಾದಾಗ ಜಾತಿಗಳಾಗಿ ಪರಿವರ್ತನೆ ಹೊಂದಿರುತ್ತವೆ. ದಸ್ಯುವರ್ಣ. ದಾಸವರ್ಣವೆಂದು ಹೆಸರಾದ. ಶೂದ್ರರಲ್ಲಿದ್ದ ಬೇರೆ ಬೇರೆ ತರದ ವರ್ಗಗಳು ಭಿನ್ನ ಭಿನ್ನ ಜಾತಿಗಳಾಗಿ ಮಾರ್ಪಟ್ಟವು. ಜಾತಿತತ್ವದ ಮೂಲ ಉಗಮವು, ಜನಾಂಗ ವ್ಯತ್ಯಾಸಗಳಲ್ಲಿಯ ಅಭಿಮಾನ ಮತ್ತು ದುರಭಿಮಾನದಿಂದ ಉಂಟಾಗಿ ನಂತರ ಅನೇಕ ಹೆಸರು ಪಡೆದು ನಾಲ್ಕುಸಾವಿರ ವರ್ಷಗಳಲ್ಲಿ ಸುಮಾರು ಮೂರು ಸಾವಿರ

ಜಾತಿಗಳು ವಿವಿಧ ಮೂಲಸ್ಥಗಳಿಂದ ಸಿದ್ಧವಾಗಿರುತ್ತವೆ. ಇತರ ಅನೇಕ ಕಾರಣಗಳು ಜಾತಿಗಳ ಹುಟ್ಟಿಗೆ ಕಾರಣವಾಗಿರಬಹುದು. ಯಾವುದೂ ಇದೊಂದು ಸಂಘಟನೆಯು ಮತ್ತು ಸಮಂಜಸ ಕಾರಣವೆಂದು ಒಪ್ಪಬೇಕಾಗುತ್ತದೆ. ಜಾತಿಗಳು ಹುಟ್ಟಿ ಬೆಳೆಯಲು ಸಮಾಜ ಪರಿವರ್ತನೆಯ ನಿಬಂಧನೆಗಳು ಅವಲಂಬಿತವಾಗಿಯೇ ಹೊರತು ಇವುಗಳ ಹಿಂದೆ ಯಾವದೇ ದೈವೀಶಕ್ತಿ ಸಮರ್ಥನೆಗೆ ನಿಂತಿಲ್ಲ.

ಕೆಳಜಾತಿಯವರು ತಾವು ಜನ್ಮತಃ ಕೀಳಾಗಿ ಹುಟ್ಟಿದವರು. ಮೇಲುಜಾತಿಯವರು ತಾವು ಜನ್ಮತಃ ಉತ್ತಮರಾಗಿಯೇ ಹುಟ್ಟಿದವರೆಂದು ಹಿಂದಿನ ಕಾಲದಲ್ಲಿ ಮನುಷ್ಯವರ್ಗದಲ್ಲಿ ಹೆಚ್ಚಿನ ಮನಸ್ತಾಪಗಳು ಬೆಳೆದು ಬಂದವು. ಹುಟ್ಟುವ ಜಾತಿ ಮುಖ್ಯವಾದಾಗ ಸ್ವಂತ ಪರಿಶ್ರಮದಿಂದ ಬ್ರಹ್ಮಜ್ಞನಾಗುವ, ವೇದಾಧ್ಯಯನ ಮಾಡಿ ಉಪದೇಶಿಸುವ ಬ್ರಾಹ್ಮಣನ ಸತ್ವವು ನಿಸ್ಸತ್ವವಾದಾಗ. ಧರ್ಮದ ಹೆಸರಿನಲ್ಲಿ ಏನು ಉಪದೇಶ ಮಾಡಿದರೂ ದೈವಾಜ್ಞೆಯೆಂದು ನಂಬದೇ ಹೋದಾಗ ಧಾರ್ಮಿಕ ಗ್ರಂಥಗಳಲ್ಲಿ ಕಾಲ್ಪನಿಕ ವಿಷಯ ಸೇರಿರುವದು ಬೆಳಕಿಗೆ ಬಂದಿತು. ಸಮಾಜ ವಿಕಾಸಗೊಂಡುದರ ಫಲರೂಪವಾಗಿ ಜನ್ಮದ ಮೇಲಿಂದ ಸ್ಥಾನವನ್ನು ಕಟ್ಟಿಕೊಳ್ಳುವ ತತ್ವವು ಅಸಂಬದ್ಧ ಮತ್ತು ವಿಚಾರಹೀನವೆಂದು ಸ್ಪಷ್ಟವಾಗುತ್ತದೆ.

'ಧರ್ಮ' ಶಬ್ದದ ಹುಟ್ಟಿನ ಕಡೆಗೆ ಗಮನಿಸಿದರೆ ಅದು ಸುಸಂಸ್ಕೃತ ಮನಸ್ಸಿನ ಸುಸ್ಥಿತಿಯನ್ನು ಎತ್ತಿ ಹೇಳುತ್ತದೆ. ಉದಾಹರಿ

ಸುವ. ಪತ್ತೆಹಿಡಿಯುವ, ಪಾರಲೌಕಿಕತ್ತ್ವದ ಧರ್ಮವು ನಿಜವಾದ ಧರ್ಮ. ವರ್ಣ ಧರ್ಮ ಪದ್ಧತಿಯಲ್ಲಿ ಈ ಲಕ್ಷಣಗಳಿರುವಷ್ಟರ ವರೆಗೆ ಅದು ಸ್ವೀಕೃತವಾಗಿ ನಂತರದ ಹಂತದಲ್ಲಿ ತತ್ತ್ವಾರ್ಥ ಮೂಲಿ ಗುಂಪಾಗಿ ಹುಟ್ಟಿನ ಜೊತೆಗೆ ಅಂಟಿಸಿದಾಗ ಅದನ್ನು ಪ್ರತಿಭಟಿಸಿ ವ್ಯಕ್ತಿ–ಶಕ್ತಿಯನ್ನು ಪತ್ತೆಹಿಡಿದ ಜೈನ. ಬೌದ್ಧ ಧರ್ಮ ಗಳು ನಮ್ಮ ದೇಶದಲ್ಲಿ ಹುಟ್ಟಿ ಬಂದವು. ಮೂಲ ನಿವಾಸಿಗಳಾದ ದ್ರಾವಿಡರ ಗುಂಪಿನ ಪಾಶುಪತ. ಕಾಳಾಮುಖ. ನಕುಲೀಶ. ಶೈವ ಮೊದಲಾದ ಪಂಗಡ. ಧರ್ಮಗಳು ಆರ್ಯರಿಂದ ಬಂದ ಪಂಗಡ ಗಳು. ಸುಧಾರಣಾವಾದಿ ಪ್ರವಾದಿಗಳ ಹೊಸಧರ್ಮಗಳು ಕೂಡಿ ಬಾಳುವಾಗ ನಿಸರ್ಗ ಸಹಜ ಆಕರ್ಷಣೆಯಿಂದಲೂ ಮಹತ್ವಾ ಕಾಂಕ್ಷೆಯಿಂದಲೂ. ಶೌರ್ಯದ ಸಂಕೇತವಾಗಿಯೂ ರಕ್ತಸಂಬಂಧ ಗಳು ಉಂಟಾಗಿ ಅವರನ್ನು ಗುರುತಿಸಲು ಹುಟ್ಟಿದ ಹೆಸರುಗಳೇ ಜಾತಿಗಳಾಗಿ ಬೆಳೆದು ಬರಲು ಮತ್ತೊಂದು ಕಾರಣವಾಗಿರು ತ್ತದೆ. ವರ್ಣ. ಗೋತ್ರ. ಪಂಗಡಗಳನ್ನು ಗಣಿಸದ. ರಾಜಕೀಯ ಒತ್ತಡಕ್ಕೊಳಗಾದ ಮದುವೆಗಳಿಂದ ಈ ಪದ್ಧತಿಯಲ್ಲಿ ಮಾರ್ಪಾಡು ಉಂಟಾಗಿರಬೇಕು.

೫. ಪರಂಪರೆಯಲ್ಲಿ ಜಾತಿ ಮತ್ತು ವಿವಾಹ

ಜಾತಿ ಮತ್ತು ವಿವಾಹ ಶಬ್ದಗಳು ಕಾಲ ಕಾಲಕ್ಕೆ ರೂಪ ಬದಲಿಸಿಕೊಳ್ಳುತ್ತ ಬಹು ಪುರಾತನಕಾಲದಿಂದಲೂ ಪ್ರಭಾವ ಶಾಲಿಯಾಗಿ ಬೆಳೆಯುತ್ತ ಬಂದಿರುತ್ತವೆ. ಜಾತಿ ಮತ್ತು ವಿವಾಹ

ಶಬ್ದಗಳು ಖಚಿತವಾದ ವ್ಯಾಖ್ಯಾನವನ್ನು ಹೊಂದಿರದೇ ಹೋಗಿದ್ದರೂ ಅವು ಜನಮನದಲ್ಲಿ ಅಚ್ಚೊತ್ತಿ ನಿಂತಿವೆ. ವೃತ್ತಿಯಿಂದ ಬರುವ ಜಾತಿ, ಹುಟ್ಟಿನಿಂದ ಬರುವ ಜಾತಿಗಳೆರಡೂ ತಮ್ಮದೇ ಆದ ಸೀಮಾಗೆರೆಗಳನ್ನು ಕೊರೆದು ಕೊಳ್ಳದೆ ಹಾಗೊಮ್ಮೆ ಹೀಗೊಮ್ಮೆ ಕಂಡು ಜನಜೀವನದಲ್ಲಿ ಸ್ಥಿರಗೊಂಡವು.

ಸಮಾಜದಲ್ಲಿ ಶ್ರೇಷ್ಠ ಜಾತಿಯ ಪ್ರತಿಷ್ಠೆ ಬೆಳೆದಾಗ ಪರಿಶ್ರಮ ಪಟ್ಟು ಅಧ್ಯಯನ ಮಾಡಿ ಬ್ರಹ್ಮತತ್ವ ಜಿಜ್ಞಾಸೆಯಲ್ಲಿ, ತಿಳಿಸಂದು ಬ್ರಾಹ್ಮಣನಾಗುವ ಬದಲು ಹುಟ್ಟಿನಿಂದ ಅನಾಯಾಸವಾಗಿ ಬ್ರಾಹ್ಮಣನಾಗುವ ದಾರಿಯನ್ನು ಹುಡುಕಿಕೊಂಡನು. ಆಗ ಶೂದ್ರವರ್ಣೀಯನಾಗಿದ್ದರೂ ಬ್ರಹ್ಮಪದವಿಗರ್ಹನಾದ ವ್ಯಕ್ತಿ 'ಶೂದ್ರ' ನೆಂದು ಕರೆಯಿಸಿಕೊಳ್ಳಲಾರದೆ ತನ್ನದೇ ಆದ ಹೊಸ ದಾರಿ ಹುಡುಕಿಕೊಂಡಿರಬೇಕು. ಇಂಥ ಪ್ರಸಂಗಗಳು ಹೆಚ್ಚಾಗುತ್ತ ನಡೆದಂತೆ ಜಾತಿಗಳ ಹೆಚ್ಚಳವಾಗಿರಬೇಕು.

ಸಾಮಾಜಿಕ ಪರಿವರ್ತನೆಗಳು ಹೇಗಿದ್ದರೂ ಮಾನವನ ಸ್ವಭಾವದ ಮೂಲತತ್ವ ಒಂದೇ. ಬುದ್ಧಿಬಲದಿಂದ ಪರಿಷ್ಕೃತಗೊಂಡ ದೈಹಿಕ ಮಾನಸಿಕ ಆಕಾಂಕ್ಷೆಗಳೂ ಕೂಡ ಹಸಿವು–ತೃಷೆ–ಕಾಮೇಚ್ಛೆಗಳನ್ನು ಮೀರಲು ಶಕ್ಯವಾಗಲಿಲ್ಲ.

ಮನುಷ್ಯನು ನಿಸರ್ಗದಲ್ಲಿ ಬದುಕಲು ಅದರ ಪ್ರಕೋಪ–ವಿಕೋಪಗಳನ್ನು ಕಂಡು, ಅದ್ಭುತ ಶಕ್ತಿಗೆ ಹೆದರಿ ಅದನ್ನೇ 'ದೇವರ' ಹೆಸರಿನಿಂದ ಕರೆದು, ಅದನ್ನು ಒಲಿಸಿ ಕೊಳ್ಳುವುದಕ್ಕಾಗಿ ಆರಾಧಿಸಿ, ಹಾಗೆ ಆರಾಧಿಸುವ ದಾರಿಯ ಹೆಜ್ಜೆಗಳನ್ನು ಸೇರಿಸಿ 'ಧರ್ಮ'

ಎಂದು ಸ್ವೀಕರಿಸಿದನು. ಸಮಾಜದ ಸುವ್ಯವಸ್ಥೆಗಾಗಿ ಧರ್ಮವನ್ನು ವ್ಯಕ್ತಿಯ ಉದ್ಧಾರಕ್ಕಾಗಿ ಆಶ್ರಮಗಳನ್ನು ಕೂಡಿಸಿಕೊಂಡನು. ಇವು ಮನುಷ್ಯನ ಚಂಚಲಮನಸ್ಸಿನ ಪರಿಣಾಮದಿಂದ ಕೆಲವೊಮ್ಮೆ ಮಹಾತ್ವಾಕಾಂಕ್ಷೆಯಿಂದ, ಕೆಲವೊಮ್ಮೆ ಶೌರ್ಯದ ಸಂಕೇತವಾಗಿ ಕೆಲವೊಮ್ಮೆ ಅತ್ಯಾಸೆಯಿಂದ ನಡೆಯುವ ಅವ್ಯವಸ್ಥೆಯಿಂದ ವರ್ಣ, ಗೋತ್ರಗಳನ್ನು ಪರಿಗಣಿಸದಿರುವ ಮದುವೆಗಳಿಂದ ಅಂಥವರನ್ನು ಗುರುತಿಸಲು, ಎತ್ತಿ ಹೇಳಲು, ದೂರವಿರಿಸಲು ಜಾತಿಗಳನ್ನು ಸೃಷ್ಟಿಸಿರಬೇಕು.

ಗಾಂಧರ್ವ ಮತ್ತು ಸ್ವಯಂವರ ಪದ್ಧತಿಗಳು ಅಂದಿನ ಜನಾಂಗದ ಸ್ವತಂತ್ರ ಭಾವನೆಯನ್ನು ಎತ್ತಿ ಹಿಡಿಯುತ್ತವೆ. ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡವರು ಈ ಪದ್ಧತಿಗಳನ್ನನುಸರಿಸುತ್ತಿದ್ದರು. ಇಲ್ಲಿ ಗುರು–ಹಿರಿಯರ ಇಷ್ಟ–ಅನಿಷ್ಟಗಳಿಗೆ ಅವಕಾಶ ವಿರಲಿಲ್ಲ. ಪರಕೀಯರ ಆಕ್ರಮಣಗಳಿಂದಾದ ರಾಜಕೀಯ ಸ್ಥಿತ್ಯಂತರಗಳಿಂದ ಸಾಮಾಜಿಕ ಆಚರಣೆಗಳಿಗೆ ಆತಂಕವೊದಗಿದಾಗ ಬದಲಾವಣೆ ಅನಿವಾರ್ಯವಾಗಿ ವಿವಾಹ ಪದ್ಧತಿಯಲ್ಲಿ ಮಾರ್ಪಾಡು ಉಂಟಾಗಿರಬೇಕು.

ಜಾತಿ ಉಪಜಾತಿಯ ಹೆಸರನ್ನು ಹೇಳದೆಯೆ ರಾಮಾಯಣ, ಮಹಾಭಾರತ ಕಾಲದಿಂದ ವಿಜಾತಿ ವಿವಾಹ ಸಂಬಂಧಗಳು ನಡೆಯುತ್ತಲೇ ಬಂದಿವೆ. ರಾಮ–ಲಕ್ಷ್ಮಣರು ಶೂರ್ಪನಖಿಯನ್ನು, ಸೀತೆ ರಾವಣನನ್ನು ತಿರಸ್ಕರಿಸಿದ್ದು ಅವರವರ ಏಕಪತ್ನಿವ್ರತ, ಏಕಪತಿ ವ್ರತದ ಕಾರಣಕ್ಕಾಗಿಯೇ ಹೊರತು ಜಾತಿಯ ನಿಮಿತ್ತ ಅಲ್ಲ. ಅರ್ಜುನನು ಉಲೂಪಿ, ಚಿತ್ರಾಂಗದೆ, ಸುಭದ್ರೆಯರನ್ನು ಮದುವ

ವರನನ್ನು. ಧೀಮಾನು ಸಿರಿವಂತನನ್ನು ಬಲ್ಲವನನ್ನು ಜಾತಿ ಅಥವಾ ಕುಲವನ್ನು ನೋಡುತ್ತಿಲ್ಲ.

ಕ್ರಿ. ಶ. ವರುಷಗಳಲ್ಲಿ ನಮ್ಮ ದೇಶದಮೇಲೆ ಅನೇಕ ವಿದೇಶಿಯರ ಆಗಮನವಾದ ನಂತರ ಗಾಂಧರ್ವ ಮತ್ತು ಸ್ವಯಂವರ ಪದ್ಧತಿಯ ವಿವಾಹಗಳನ್ನು ದೂರವಿಟ್ಟು ಬಾಲ ವಿವಾಹಗಳನ್ನು ಬಳಕೆಗೆ ತಂದಿರಬೇಕು. ಇದು ಮಹಿಳೆಯರಿಗೆ ಮತ್ತೊಂದು ಸಮಸ್ಯೆಯನ್ನು ತಂದಿಟ್ಟಿತು. ಬಾಲವಿವಾಹದಲ್ಲಿ ಆಕಸ್ಮಿಕವಾಗಿ ವಿಧವೆಯಾದ ಮಹಿಳೆ ಜೀವನ್ಮೃತಳು. ವಿಧುರನಾದರೆ ಮತ್ತೆ ಮದುವೆಯಾಗಲು ಸ್ವತಂತ್ರ! ಹೆಣ್ಣು ಬಾಲಕಿಯೇ ಆಗಿರಲಿ. ಯುವತಿಯೇ ಆಗಿರಲಿ ವಿಧವೆಯಾದರೆ ಘೋರ ಶಿಕ್ಷೆಯನ್ನು ಅನುಭವಿಸಲೇ ಬೇಕು! ಬ್ರಾಹ್ಮಣ ವಿಧವೆಯಾದರೆ ತಲೆಬೋಳಿಸಿಕೊಂಡು ಅವಳಿಗಿಲ್ಲದ ಸಲ್ಲದ ವಿರೂಪ ಹೊತ್ತು ತೊತ್ತಿನಂತೆ ಬದುಕಬೇಕು. ಮರುಮದುವೆಗೆ ಮಾತ್ರ ಅವಳಿಗೆ ಅವಕಾಶವಿರಲಿಲ್ಲ. ಇತ್ತೀಚಿನ ಶತಕಗಳಲ್ಲಿ ರಾಜಾರಾಮಮೋಹನರಾಯ, ಬಾಲ ಗಂಗಾಧರ ಟಿಳಕ, ಮಹರ್ಷಿಕರ್ವೇ ಮೊದಲಾದವರು ವಿಧವಾ ವಿವಾಹಕ್ಕೆ ಬೆಂಬಲಕೊಟ್ಟು ಕ್ರಾಂತಿಯನ್ನೆಬ್ಬಿಸಿ ಸಮಾಜವನ್ನೆದುರು ಹಾಕಿಕೊಂಡು ಹೋರಾಡಬೇಕಾಯಿತು. ಆದರೂ ವಿಧವಾ ವಿವಾಹವು ಜನಪ್ರಿಯವಾಗದೆ, ಜನಮನ್ನಣೆ ಪಡೆಯದೆ ಉಳಿಯಲು ಪುರುಷ ಸ್ವಾರ್ಥಪರ ಭಾವನೆ ಕಾರಣವಾಗಿರುವದು ಸ್ಪಷ್ಟ.

ವಿಧವೆಯರಾಗಿ ಸಮಸ್ಯೆಯಾಗದಿರಲೆಂದು ಹೆಣ್ಣು ಹುಟ್ಟಿದ ಕೂಡಲೆ ಕೊಲ್ಲುವ ಗಂಡ ಸತ್ತಕೂಡಲೇ ಚಿತೆಗೆ ಹಾರಿ ಸತ್ತ ಗಂಡನ

ಜೊತೆಗೆ ಸತಿ ಹೋಗುವ ಅಮಾನುಷತೆ ರೂಢಿಯಲ್ಲಿ ಬಂದಿರಬೇಕು. ಜೋಹಾರ ಎಂದು ಕರೆಸಿಕೊಳ್ಳುವ ಸತೀ ಪದ್ಧತಿಯು ರಜಪೂತರಲ್ಲಿ ಮುಖ್ಯವಾಗಿತ್ತು. ರಜಪೂತ ಪುರುಷರು ರಣರಂಗದಲ್ಲಿ ಕಾದಾಡಿ ಮಡಿದರೆ ವೀರಸ್ವರ್ಗಪಡೆಯುವ ನಂಬಿಗೆಯಿಂದ ಹೋರಾಡಿ ಮಡಿದಾಗ ಅವರ ಹೆಂಡಂದಿರು, ಪತಿನಿಷ್ಠೆಯನ್ನು ತೋರಿಸಿ ಕೊಳ್ಳಲು, ಕ್ಷಚಿತ್ತಾಗಿ ಶತ್ರುರಾಜರ ಸೊತ್ತಾಗಬಾರದೆಂದು 'ಸತಿ' ಹೋಗುತ್ತಿದ್ದರು. ಈ ಪದ್ಧತಿಗೆ ಅಂದಿನ ರಾಜಕೀಯ ಸ್ಥಿತಿಯು ಕೆಲಮಟ್ಟಿಗೆ ಕಾರಣವಾಗಿತ್ತು. ಸಹಗಮನ ಪದ್ಧತಿಯು ಸತಿಗೆ ಮಾತ್ರ ! ಬರಬರುತ್ತ ಇದು ತಾಯಿಯಾಗುವ ಮತ್ತು ತಾಯಿ ಯಾದ ಹೆಣ್ಣಿಗೆ ಒತ್ತಾಯದ . ಒಲ್ಲದ ಮನಸ್ಸಿನ ಸಂಪ್ರದಾಯ ವಾದಾಗ ಅತಿರೇಕಕ್ಕಿಟ್ಟುಕೊಂಡಿರಬೇಕು. ಹಲವು ಸಮಸ್ಯೆಗಳಿಗೆಡೆ ಗೊಟ್ಟಿರಬೇಕು. ಹೆಣ್ಣಿನ **ಜೊತೆಗೆ** ಹುಟ್ಟುವ ಸಮಸ್ಯೆಗಳನ್ನು ಎದುರಿಸುವ ಗೊಡವೆಬೇಡವೆಂದು ದೇವರ ಹರಕೆಯ ಹೆಸರಿನಲ್ಲಿ ಹೆಣ್ಣು ಹುಟ್ಟಿದಕೂಡಲೆ ಕೊಲ್ಲುವಂಥ ಅನಾಗರಿಕ ಪದ್ಧತಿಯು ಬೆಳೆದಿರಬೇಕು. ಇದೇ ಹಿನ್ನೆಲೆಯಲ್ಲಿ ಮದುವೆಯಾಗದ ಮೈನೆರೆದ ಹೆಣ್ಣನ್ನು ಕಣ್ಣುಕಟ್ಟಿ ಕಾಡಿಗೆ ಬಿಡುವ ಅಮಾನುಷತೆಯನ್ನು ಸಾಮಾಜಿಕರು ಒಪ್ಪಿಕೊಂಡಿರಬೇಕು. ಇಂಥ ಎಲ್ಲ ಅಮಾನವೀಯ ಅನಾಗರಿಕ ಪದ್ಧತಿಯ ಹಿಂದೆ "ಮದುವೆ" ಒಂದು ಜಟಿಲ ಸಮಸ್ಯೆ ಯಾಗಿ ನಿಂತಿದೆಯೆಂದು ಬೇರೆಹೇಳಬೇಕಾಗಿಲ್ಲ!

ಸತಿ ಸಹಗಮನ ಪದ್ಧತಿಯನ್ನು ವೇದಕಾಲೀನರು ಬೆಂಬಲಿ ಸಿದ್ದು ಕಂಡು ಬರುವುದಿಲ್ಲ. ಸ್ವಯಂವರ. ವಿಧವಾ ವಿವಾಹ ವನ್ನು ಪುರಸ್ಕರಿಸಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ

ಇತ್ತೀಚೆಗೆ ೧೮೫೬ರಲ್ಲಿ ನಮ್ಮ ದೇಶದಲ್ಲಿ 'ವಿಧವಾ ವಿವಾಹ' ಪ್ರೋತ್ಸಾಹಿಸುವ ಕಾರ್ಯವನ್ನು ಜಾರಿಗೆ ತಂದಿದ್ದಾರೆ.

ಆರ್ಯರ ಆಗಮನಕ್ಕೆ ಮೊದಲು ನಾಗರಿಕಜೀವನ ನಡೆಸುತ್ತಿದ್ದ ದ್ರಾವಿಡರಲ್ಲಿ ಮಾತೃಪ್ರಧಾನ ಕುಟುಂಬಗಳು ಪ್ರಚಲಿತವಾಗಿದ್ದವು. ಆಗ ಹೆಣ್ಣು ಗೃಹಸ್ವಾಮಿನಿಯಾಗಿದ್ದಳು. 'ಪೃಥಿವೀ ರೂಪಾ' ಆಗಿದ್ದಳು. ವಂಶಾಭಿವೃದ್ಧಿ ವಿವಾಹದ ಗುರಿಯಾಗಿತ್ತು. ಪತಿ ಅಕಾಲದಲ್ಲಿ ಮರಣಿಸಿದರೆ, ಅಶಕ್ತನಾಗಿದ್ದರೆ. ಗಂಡನು ಬಹಳ ಕಾಲ ಹೆಂಡತಿಯನ್ನು ಬಿಟ್ಟು ದೂರ ಹೋಗಿದ್ದರೆ. ಸಂತಾನವೃದ್ಧಿಗಾಗಿ ಹೆಣ್ಣು ಮರುಮದುವೆ ಮಾಡಿಕೊಳ್ಳಬೇಕಿತ್ತು. ದ್ರಾವಿಡ ಸಂಪ್ರದಾಯದ ಪ್ರಭಾವವು ಮಹಾಭಾರತದ 'ನಿಯೋಗ' ಪದ್ಧತಿಗೆ ಮೂಲವಾಗಿರಬೇಕು.

ಅಥರ್ವವೇದದ ಕಾಲದಲ್ಲಿಯ ವಿವಾಹದ ಕಲ್ಪನೆಯು ಪುರಾತನರ ದೃಷ್ಟಿಕೋನವನ್ನು ಎತ್ತಿ ಹೇಳುತ್ತದೆ. ವಿವಾಹದಿಂದುಂಟಾಗುವ ಪತಿ–ಪತ್ನಿಯರ ಸಂಬಂಧವು ಕೇವಲ ಮಾನಸಿಕ ಬಂಧನವಷ್ಟೇ ಅಲ್ಲ. ಅದು ಶಾಸನಿಕ ಬಂಧನವೂ ಆಗಿತ್ತು. ಪರಸ್ಪರ ಏಕಮನಸ್ಸಿನಿಂದ ಪ್ರೀತಿಸಿ ಪತಿ ಪತ್ನಿಯರು ನಡೆನುಡಿ. ಧರ್ಮಕರ್ಮಗಳಲ್ಲಿ ಏಕಚಿತ್ತರಾಗಿ ನಡೆಯಬಲ್ಲವರಾಗಬೇಕು: ಕುಟುಂಬದ ಒಳಾಡಳಿತವು ಸ್ತ್ರೀಗೆ.ಸಂಪಾದನೆ ಗೃಹರಕ್ಷಣೆ ಪುರುಷನಿಗೆ ಸೇರಿದ್ದು ; ಸ್ತ್ರೀ–ಪುರುಷರ ಅಭಿಲಾಷೆಯಂತೆ ಮದುವೆ ನಡೆಯಬೇಕೆಂದು ಅಥರ್ವವೇದದಲ್ಲಿ ಹೇಳಿದ್ದು ನೋಡಿದರೆ ಮದುವೆಗೂ ಜಾತಿಗೂ ಸಂಬಂಧ ಕಲ್ಪಿಸಿಲ್ಲವೆಂದು ಸ್ಪಷ್ಟವಾಗುತ್ತದೆ.

ಋಗ್ವೇದದ ಕಾಲದಲ್ಲಿ ಪುರುಷ ಪ್ರಾಧಾನ್ಯತೆ ತೋರುತ್ತದೆ. ಆದರೆ ಆಗಲೂ ಏಕ ಪತ್ನಿವ್ರತಸ್ಥರಿಗೆ ಸಮಾಜದಲ್ಲಿ ಹೆಚ್ಚು ಗೌರವ ವಿತ್ತು. ಕ್ರಿ. ಶ. ಪೂ. ೭೦೦೦ ದಿಂದ ೪೫೦೦ ರ ಮಧ್ಯದಲ್ಲಿ ಚಾತುರ್ವರ್ಣಗಳು ಜಾತೀಯ ಅಥವಾ ವರ್ಗೀಯ ಭೇದಭಾವವನ್ನು ಪ್ರತಿನಿಧಿಸಿಲ್ಲ. ಅವು ವೃತ್ತಿವಾಚಕ ಅಭಿದಾನಗಳು ಮಾತ್ರವಾಗಿದ್ದವು. ಅಥರ್ವವೇದ ಕಾಲದಲ್ಲಿ ಬ್ರಾಹ್ಮಣವರ್ಗವು ಸಮಾಜದಲ್ಲಿ ಹೆಚ್ಚು ಪ್ರತಿಷ್ಠೆಯನ್ನು ಗಳಿಸಿಕೊಂಡಿತ್ತು. ಇದರಿಂದಾಗಿ ವರ್ಣವ್ಯವಸ್ಥೆಯು ಭಿನ್ನವಾದ ಸೀಮಿತವಾದ ಅರ್ಥ ಹೊಂದಿತ್ತು. ತತ್ಪರಿಣಾಮವಾಗಿ ಸಮಾಜ ವ್ಯವಸ್ಥೆಯಲ್ಲಿ ಬರಬರುತ್ತಾ ಸ್ಥಿತ್ಯಂತರಗಳು ಮೂಡಿ ನಿಂತವು.

ಋಗ್ವೇದದ ಕಾಲದಿಂದಲೂ ವಿವಾಹವು "ಸಾಮಾಜಿಕ ಒಪ್ಪಂದ"ವೆಂದು (Social Contract) ಪರಿಗಣಿಸಲ್ಪಟ್ಟಿದೆ. ಸಾಮಾಜಿಕ ಮಹತ್ವವನ್ನು ಪಡೆದಿದೆ. ಆಗಿನಿಂದಲೂ ಸ್ತ್ರೀತ್ವದ ಸಫಲತೆ. ಪುರುಷನ ಯಶಸ್ಸುಗಳಿಗೆ ವಿವಾಹ ಪೂರಕವಾಗಬೇಕೆಂದು ನಂಬಿದ್ದರು. ಸ್ತ್ರೀಪುರುಷರ ಸಂಬಂಧದ ನೈತಿಕ ಕಟ್ಟುಪಾಡುಗಳ ಸೈದ್ಧಾಂತಿಕ ಸಾಧನೆಗೆ ಅವರು ವಿವಾಹ ಸೂತ್ರಗಳನ್ನು ಸ್ವೀಕರಿಸಬೇಕಾಗಿತ್ತು.

ಸಂತಾನಾಭಿವೃದ್ಧಿ ಮಾಡಿ. ವೀರಮಾತೆಯಾಗಿ. ಗೃಹಸ್ವಾಮಿನಿಯಾಗಿ. ಎಲ್ಲರಿಗೂ. ಸರ್ವಪ್ರಾಣಿಗಳಿಗೂ ಮಂಗಲದಾಯಿಯಾಗಿ. ಸುಖದಾಯಿನಿಯಾಗಿ. ಬಾಳಬೇಕಾದ ಹೊಣೆ ಮಹಿಳೆಯ ಪಾಲಿಗಿತ್ತು. ಪುರುಷನ ರಾಗ-ಭೋಗಗಳ ಸಾಧನವಾಗಿ

ವನನ್ನು ಆಕರ್ಷಿಸಿ ತೃಪ್ತಿಪಡಿಸಬೇಕು. ಸೋಮಯಾಗದಂತೆ ತ್ರೀಯು ಪತಿಯನ್ನು ಆನಂದಗೊಳಿಸಬೇಕು. ಪವಿತ್ರವಾದ ಯತ್ನಗಳನ್ನು ಹೊಂದಿದ 'ಪೃಥಿವಿರೂಪಾ' ಎಂದು ಕರೆಯಿಸಿ ಳ್ಳುವ ಯೋಗ್ಯನನ್ನು ಮಾತ್ರ ಋಗ್ವೇದವು ಗೌರವಿಸುತ್ತದೆ. ಯಜ್ಞಕಾರ್ಯದಲ್ಲಿ ಸಮಭಾಗಿಯಾಗುವ ಅವಕಾಶವನ್ನು ಈ ಾಲದವರು ಮಹಿಳೆಗೆ ಕೊಟ್ಟಿದ್ದರು. ವಿಧವಾವಿವಾಹ ಸ್ವಯಂವರ ವಿಧಾನಗಳು ಆಗ ಮಾನ್ಯವಾಗಿದ್ದುವು. ಸತಿಸಹಗಮನಕ್ಕೆ ಬೆಂಬಲ ರಲಿಲ್ಲ.

> ಅಜ್ಯೇಷ್ಠಾಸ ಅಕನಿಷ್ಠಾಸ ಏತೇ ಸಂಭ್ರಾತರೋ ವಾವೃಧುಃ
> ಸೌಭಗಾಯ ।
> ಯುವಾ ಪಿತಾ ಸ್ವಪಾರುದ್ರ ಏಷಾಂ ಸುದುಘಾಪೃಶ್ನಿ :
> ಸುದಿನಾಮರುದ್ಭ್ಯ :॥
>
> (೫–೬೦–೫ ಋಗ್ವೇದ)

ಜ್ಯೇಷ್ಠ ಕನಿಷ್ಠರೆಂದು ಯಾರೂ ಇಲ್ಲ. ಎಲ್ಲರೂ ಸೋದರರು, ಸಮಾನರು. ಕಲ್ಯಾಣ ಮಾರ್ಗದಲ್ಲಿ ನಡೆದು ವೃದ್ಧಿಹೊಂದಲಿ. ಅಲಂಕರಣಿತನಾದ ಕಲ್ಯಾಣಮಯ ರುದ್ರನೇ ಎಲ್ಲರ ತಂದೆ. ಅನ್ನ ನೀಡುವ ಭೂಮಿಯೇ ಎಲ್ಲರ ತಾಯಿ".

"ಮಂತ್ರ, ಧ್ಯೇಯ, ಸಂಕಲ್ಪ, ಹೃದಯ, ಉದ್ದೇಶ. ಸಮಂತಾ ಭಾವನೆ ಸಮಾನವಾಗಿರಲಿ, ದೃಢವಾಗಿರಲಿ" ಯೆಂದು ಸ್ಪಷ್ಟಪಡಿಸಿದ ಋಗ್ವೇದದ ಜನತೆಯ ದೃಷ್ಟಿಯಲ್ಲಿ ಎಲ್ಲ ವರ್ಣೀಯರು ಸಾಮಾಜಿಕವಾಗಿ ಸಮಾನರು. ಸೋದರರು. ವರ್ಣಗಳು ವೃತ್ತಿ ಸೂಚಕಗಳು ಮಾತ್ರ. ಜಾತಿ ಸೂಚಕವಲ್ಲವೆಂದು ತಿಳಿದು ಬರುತ್ತದೆ.

ವೇದಗಳ ನಂತರದ ಕಾಲದಲ್ಲಿ ಸ್ತ್ರೀಯರ ಸ್ಥಾನ ಇಳಿಮು
ವಾಗುತ್ತ ಬಂದು ಸ್ಮೃತಿಗಳ ಕಾಲದ ಮನು, ಕಾತ್ಯಾಯನ, ಯಾ
ವಲ್ಕ್ಯ, ಪರಾಶರ, ಬೃಹಸ್ಪತಿ ಮೊದಲಾದ ಸ್ಮೃತಿಕಾರರು ಸ್ತ್ರೀ
ಯರ ಸ್ಥಾನದ ಬಗೆಗೆ ಕೆಲವು ಕ್ಷೇತ್ರಗಳಲ್ಲಿ ಮೆಚ್ಚಿನ, ಕೆಲವು ಕ್ಷೇ
ಗಳಲ್ಲಿ ಕನಿಷ್ಠ ಸ್ಥಾನವನ್ನು ನಿರ್ದೇಶಿಸಿದ್ದಾರೆ.

ನಮ್ಮ ದೇಶವು ಹಲವಾರು ರಾಜರ ಆಡಳಿತಕ್ಕೆ ಒಳಪಟ್ಟ
ಕ್ರಿ. ಶ. ಪೂರ್ವದಿಂದಲೂ ಪರದೇಶಗಳೊಡನೆ ವ್ಯಾಪಾರಿ ಸಂಬಂ
ವಿದ್ದ ದಕ್ಷಿಣಭಾರತದ ಹಲವು ಬಂದರಗಳು ಆಗಿನಿಂದಲೂ ಪ್ರಸಿ
ವಾಗಿದ್ದವು. ದ್ರಾವಿಡ ಭಾಷೆಗಳ ಅದರಲ್ಲೂ ಕನ್ನಡದ ಸು
ಗಳಿರಬೇಕೆಂದು ಗ್ರೀಕ ಪ್ರಹಸನದಲ್ಲಿ ಬರುವ ಮಹಿಳೆಯ ಪಾತ್ರ
ಇಲ್ಲಿಂದ ಮಹಿಳೆಯರನ್ನು ಪರದೇಶಗಳಿಗೆ ಕಳಿಸುತ್ತಿದ್ದರೆನ್ನ
ಸಾಕ್ಷಿ.

ಮೌರ್ಯರು ಭಾರತದಲ್ಲಿ ಪ್ರಬಲರಾಗಿದ್ದ ಕಾಲದಲ್ಲಿ ವಿದೇ
ಯರ ಜೊತೆಗೆ ನಿಕಟ ಸಂಬಂಧವಿಟ್ಟುಕೊಂಡಿದ್ದರು. ಗ್ರೀ
ದೊರೆ ಸೆಲ್ಯೂಕಸ್ ನಿಕಟೋರನ ಮಗಳು ಹೆಲೆನ್‌ಳನ್ನು ಚಂ
ಗುಪ್ತ ಮೌರ್ಯನು ಮದುವೆಯಾಗಿದ್ದನು. ಮುಂದೆ ಅನೇಕ ದೇ
ಗಳಿಂದ ಪರಕೀಯರು ಇಲ್ಲಿಗೆ ಬಂದು ನೆಲಸಿದಾಗ ಇಂಥ ಅನೇ
ಘಟನೆಗಳು ಜರುಗಿರುವದನ್ನು ಇತಿಹಾಸದ ಪುಟಗಳು ಕೆಲವೊಮ್ಮೆ
ಮುಚ್ಚಿ ಕೆಲವೊಮ್ಮೆ ಬಿಚ್ಚಿ ಹೇಳುತ್ತವೆ.

ನಮ್ಮ ದೇಶದಲ್ಲಿ ರಾಜ್ಯವಾಳಿದವರೆಲ್ಲರೂ ಕ್ಷತ್ರಿಯ ಅರಸ
ಅಲ್ಲ. ವಿವಾಹ ಸಂಬಂಧದಲ್ಲಿ ಜಾತಿಗಿಂತ ಶೌರ್ಯ, ಸೌಂದ
ಸಂಪತ್ತಿಗಳಿಂದ ಒದಗುವ ಸಮಾನಬಲವನ್ನು ಅಂತಸ್ತನ್ನು ಮಾ

ಣಿಸುತ್ತಿದ್ದರು. ಇಲ್ಲಿ ಧಾರ್ಮಿಕ ಭಾವನೆಗಳಿಗಿಂತ ಕೀಯ ಸ್ವಾರ್ಥೋದ್ದೇಶವೇ ಮುಖ್ಯವಾಗಿರುತ್ತಿತ್ತು. ಇದನ್ನು ಪಡೆಸುವುದಕ್ಕಿಂತ ರಾಜಕೀಯ ವ್ಯಾಪಾರ ಎಲ್ಲವೆ ಒಪ್ಪಂದ ಬಹುದಷ್ಟೆ! ಗೆದ್ದ ಅರಸನಿಗೆ ಸೋತ ಅರಸನು ತನ್ನ ಳನ್ನು ಕೊಡುವಾಗ ಅವಳ ಜೊತೆಗೆ ನೂರಾರು ಜಾತಿಯ ದಾರು ದಾಸಿಯರನ್ನು ಕೊಡುತ್ತಿದ್ದನು. ರಾಣಿ ಮತ್ತು ಯರಲ್ಲಿ ಸ್ಥಾನ ಭಿನ್ನತೆ ಇದ್ದರೂ ರಾಜನು ತನಗೆ ಬೇಕಾದ ನ್ನು ಉಪಭೋಗಿಸಬಹುದಾಗಿತ್ತು. ಸುಂದರಿಯಾದವಳನ್ನು ಕುಮಾರಿಯಾದವಳನ್ನು ಪಡೆಯಲುಬೇಕಾದಷ್ಟು ಹೋರಾಟ ದಯೆ ಹೊರತು ಅವಳ ಜಾತಿಯ ಪ್ರಶ್ನೆಯಾವಾಗಲೂ ಲ್ಲ.

ಪರಕೀಯರು ಪ್ರಬಲರಾದಾಗ ಅವರನ್ನು ಮೆಚ್ಚಿಸಲು ಹೆಣ್ಣುಮಕ್ಕಳನ್ನು ಕೊಟ್ಟು ಸ್ನೇಹ ಬೆಳೆಸಿದವರು ಉಂಟು, ಂಬಂಧ ಬೆಳೆಸಿದವರು ಉಂಟು. ರಾಜಕೀಯ ಸ್ಥಿತ್ಯಂತರಗಳಿಗೆ ಂದಿಕೊಂಡು ನಡೆಯಲು ಗೆಲುವಿನ ಪ್ರತೀಕವಾಗಿ ರಕ್ತಸಂಬಂಧ ದ ಘಟನೆಗಳು ಐತಿಹಾಸಿಕ ಸತ್ಯಸಂಗತಿಗಳೇ. ಆಗ ಜಾತಿಯ ಗೌಣವಾಗಿದೆ. ಅರಸರ ಅನೇಕ ಪತ್ನಿತ್ವದಲ್ಲಿಯೂ ಜಾತಿಯ ಅಡ್ಡವಾಗಿ ನಿಂತಿಲ್ಲ.

ರಕ್ತಸಂಬಂಧ ಮತ್ತು ದೈಹಿಕ ಸಂಬಂಧಗಳು ಹೆಣ್ಣು-ನಲ್ಲಿ ನಡೆದ ಎಲ್ಲ ಕಾಲದಲ್ಲಿ ಜಾತಿ ಪದ್ಧತಿ ಗೌಣ. ಅರಸರು, ಂತರು, ಅಧಿಕಾರಿಗಳು ತಮ್ಮ ಅಭೀಷ್ಟ ತೀರಿಸಿಕೊಳ್ಳಲು ಯ' ಅಡ್ಡಗೋಡೆಯನ್ನು ಕಟ್ಟಿಕೊಂಡಿಲ್ಲ.

ವರ್ಣಪದ್ಧತಿಯು ವರ್ಗಪದ್ಧತಿಗೆಡೆಮಾಡಿಕೊಟ್ಟ ಸಮಾಜದಲ್ಲಿ ಹೆಚ್ಚಿನ ಸ್ಥಿತ್ಯಂತರಗಳು ನಡೆದಿವೆ. ಶ್ರೇಷ್ಠ ವರ ದವರು ಹೆಚ್ಚು ಬುದ್ಧಿವಂತರಾಗಿ, ವರ್ಚಸ್ಸು ಜೀರಿ ಸಮಾಜ ಆಡಳಿತದ ಹೊಣೆಹೊತ್ತು ಅಧಿಕಾರ ನಡೆಯಿಸಿ ಸಂಪತ್ತು ಸಂಗ್ರ ಹಿಸಿ, ಸಾಮಾಜಿಕರ ಮೇಲೆ ಪ್ರಭುತ್ವ ಸಾಧಿಸತೊಡಗಿದರು ತಾವೇ ಶ್ರೇಷ್ಠರೆಂದು ಮೇಲ್ವರ್ಗದವರೆಂದು, ವಿಶೇಷ ಅನುಕೂಲ ಗಳನ್ನು ಕಲ್ಪಿಸಿಕೊಂಡು ಸಮಾನ ಸ್ಕಂದರೊಡನೆ ಮಾತ್ರ ಹೆಚ್ಚಿ ಸಂಪರ್ಕವನ್ನು ಉಳಿಸಿಕೊಂಡು ಹೋಗತೊಡಗಿದಾಗ ವರ್ಣಭೇದ ಸ್ಪಷ್ಟವಾಗಿ ಬೆಳೆಯುತೊಡಗಿತು.

ಕ್ರಿಸ್ತ ಪೂರ್ವ ಕಾಲದಿಂದ ಪರದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ಬೆಳೆಸಿದ್ದು, ಇಲ್ಲಿಯ ಹೆಣ್ಣುಮಕ್ಕಳನ್ನು ಅಲ್ಲಿಯ ವರು ಕೊಂಡೊಯ್ಯುವುದು ಸಹಜಕ್ರಿಯೆಯಾಗಿ ಉಳಿದು ಬಂದಿತ್ತು ಹಣವಂತರು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದಾಗ ಹಣದ ಮರ್ಜಿ ನಿಂದ ಇಲ್ಲಿಯ ಮಹಿಳೆಯರ ಜೊತೆಗೆ ಸಂಪರ್ಕಮಾಡಿದ್ದು ಅದು ಸಹಜ ಕ್ರಿಯೆಯಾಯಿತು. ಹೀಗೆ ಉಂಟಾದ ರಕ್ತಸಂಬಂ ಇನ್ನು ಬೇರೆ ರೀತಿಯಾಗಿ ನಡೆದ ರಕ್ತ ಸಂಬಂಧವು ಹಿಂದಿನ ಹಿಂದ ಧರ್ಮದ ವರ್ಣಭೇದದಿಂದ ಉಂಟಾದ ಅಸ್ಪೃಶ್ಯತೆಗೊಂಡ ಸಂಬಂಧಗಳಿಂದ ವರ್ಣವು ಜಾತಿಪದ್ಧತಿಗೆಡೆಗೊಟ್ಟಿದೆ.

ಮೊಗಲರು, ಡಚ್ಚರು, ಪೋರ್ತುಗೀಸರು, ಇಂಗ್ಲೀಷ ನಮ್ಮ ದೇಶಕ್ಕೆ ಬಂದಾಗ ವಿವಾಹದ ವಿಧಾನಗಳನ್ನು ಬಿಟ್ಟು ಸಂಬಂಧ ಬೆಳೆಸಿದ್ದು ಹೆಚ್ಚಿನ ಜಾತಿಗಳಿಗೆ ಅವಕಾಶ ಮಾಡಿಕೊಟ್ಟಿ ಕೆಲವರು ಮತಾಂತರ ಹೊಂದಿ ಅವರವರದೇ ಆದ ರೀತಿಯ

ಯಲ್ಲಿ ಅಳವಡಿಸಿಕೊಂಡರು. ರಜಪೂತ ಮಹಿಳೆಯರನ್ನು ಸ್ಲಿಂ ಪುರುಷರು ಮದುವೆಯಾದದ್ದು ಹಿಂದೂ ಮಹಿಳೆಯರು ಸ್ಲಿಂ ಅರಸರನ್ನು ಮದುವೆಯಾದದ್ದು ಇತಿಹಾಸದ ಪುಟಗಳಿಂದ ಯುತ್ತದೆ.

ಅಕ್ಬರ ಬಾದಶಹನು ರಜಪೂತ ಮಹಿಳೆಯನ್ನು ಮದುವೆ ಾಗಿ ಪಟ್ಟದರಸಿಯನ್ನಾಗಿ ಮಾಡಿಕೊಂಡದ್ದನ್ನು ಇಲ್ಲಿ ಸ್ಮರಿಸ ದು. ಬೇರೆ ಅರಸರು ಪಟ್ಟದರಸಿಯನ್ನಾಗಿ ಮಾಡದೇ ದರೂ ಯಾವದೇ ಜಾತಿಯ ಹೆಣ್ಣನ್ನು ಉಪಪತ್ನಿಯನ್ನಾಗಿ ಡಿಕೊಳ್ಳುತ್ತಿದ್ದರು.

ಕನ್ನಡ ಸಾಹಿತ್ಯ ಚರಿತ್ರೆಯು ಲಿಖಿತ ರೂಪ ಪಡೆದ ಕಾಲದಿಂದ ಕಿಸಿ ನೋಡಿದರೆ ಅರಸರು ತಮಗಿಷ್ಟವಾದ ಧರ್ಮವನ್ನು ಸರಿಸಲು ಸ್ವತಂತ್ರರಾಗಿದ್ದರು. ಆಗ ಅವರ ನಿಕಟವರ್ತಿಗಳು ಡ ಹಾಗೇ ಅರಸನ ಧರ್ಮವನ್ನು ಸ್ವೀಕರಿಸುವ ಪರಂಪರೆ ದ್ದು ಕಂಡು ಬರುತ್ತವೆ. ಬಹಳ ಸಲ ರಾಜಕೀಯ ಪ್ರಭಾವದಿಂದ ಜನ ಧರ್ಮವೇ ಜನತೆಯ ಧರ್ಮವಾಗಿ ಮಾರ್ಪಟ್ಟಿರುತ್ತದೆ. ಸರ ಆಶ್ರಯದಲ್ಲಿರಲು ಇಚ್ಛಿಸಿದ್ದ ಕವಿಗಳು ಕೂಡ ಒಮ್ಮೊಮ್ಮೆ ಸರ ಧರ್ಮವನ್ನು ಮತ್ತೊಮ್ಮೆ ಸ್ವತಂತ್ರ ಧರ್ಮವನ್ನು ಅನು ಸುತ್ತ ಬಂದಿದ್ದಾರೆ. ಪಂಪನ ಮನೆತನವೊಂದು ಧರ್ಮ, ನ ಆಶ್ರಯದಾತನಾದ ಅರಸ ಅರಿಕೇಸರಿಯು ಧರ್ಮವೊಂದು, ನು ಇಚ್ಛಿಸಿ ಅನುಸರಿಸಿದ ಧರ್ಮವೇ ಮತ್ತೊಂದು! ಬಸವ, ಹರ, ರಾಘವಾಂಕರು ಅನ್ಯಯ ಮತಾನುಯಾಯಿಯಾಗಿ ರೂ ಅವರು ಆಯ್ದುಕೊಂಡದ್ದು ಶೈವ ಧರ್ಮಾನುಸರಣೆ!

ಮಹಾ ಪುರುಷರು ಹುಟ್ಟಿದ ಧರ್ಮವೊಂದಿದ್ದರೆ ಅವರು ಸ್ಥಾಪಿಸಿ
ಅಥವಾ ಪುನರುಜ್ಜೀವಿಸಿ ನಡೆದು ತೋರಿದ ಧರ್ಮಗಳೇ ಬೇರೆ
ಯೆಂಬುದು ಐತಿಹಾಸಿಕ ಸತ್ಯ.

೬. ಜಾತಿ-ನೀತಿ-ವಿವಾಹಗಳ ನಡುವೆ

ಜಾತಿಪದ್ಧತಿಯು ಸಮಾಜದಲ್ಲಿ ಮೇಲು-ಕೀಳು. ಶ್ರೇಷ್ಠಜ
ಅಂತ್ಯಜರೆಂಬ ಕಲ್ಪನೆಯ ವಿಷಬೀಜ ಬಿತ್ತಿರುವದನ್ನು ನೋಡು
ತ್ತೇವೆ. ಬರಬರುತ್ತ ಶ್ರೇಷ್ಠರು ಕನಿಷ್ಠರನ್ನು ಶೋಷಿಸಿ. ದುಡಿಸಿ
ಕೊಂಡು ಶ್ರೀಮಂತರಾಗುತ್ತ ಬಂದರು. ಅಂತ್ಯಜರನ್ನು ದೇಹ
ದುಡಿಮೆಗೆ ತೊಡಗಿಸಿ ವೈಚಾರಿಕ ಅಧಃಪತನಕ್ಕೆ ದಬ್ಬಿ ಶ್ರೇಷ್ಠರು
ಸಮಾಜದಲ್ಲಿ ಪ್ರತಿಷ್ಠಿತರಾದರು. ಆಗ ಸ್ವಾಭಾವಿಕವಾಗಿ ವರ್ಣ
ಪದ್ಧತಿಯು ವರ್ಗಪದ್ಧತಿಯಾಗಿ ಮಾರ್ಪಟ್ಟಿತು. ಮೇಲ್ವರ್ಗದ
ಜನರು ತಮ್ಮ ಸ್ವಾರ್ಥ ಸಾಧನೆಗಾಗಿ ಇಚ್ಛೆಗೆ ಬಂದಂತೆ ನಡೆಯಲು
ಅನುಕೂಲವಾಗುವ ನೀತಿ ನಿಯಮಗಳನ್ನು ನಿರ್ಮಿಸಿಕೊಂಡಿದ್ದಾರೆ.
ತಮ್ಮ ಸುಖಸೌಧದ ನಿರ್ಮಾಣಕ್ಕೆ ಹೆಣ್ಣನ್ನು ತೃಣವಾಗಿ ಬಳಸಿ
ಕೊಂಡು ವಿಜೃಂಭಿಸುವ ಹೊತ್ತಿಗೆ ಜಾತಿ ವೈಷಮ್ಯ ಬೆಳೆದು ಜಾತಿ
ಕಲಹಗಳು ವರ್ಗ ಕಲಹಗಳಾಗಿ ಪರ್ಯಾವಸಾನ ಗೊಂಡುದನ್ನು
ನಮ್ಮ ಇತಿಹಾಸ ಮತ್ತು ಸಾಹಿತ್ಯ ಪ್ರಪಂಚಗಳು ಸಾರಿ ಹೇಳುತ್ತವೆ

ಆರ್ಥಿಕ ವ್ಯವಸ್ಥೆಯಿಂದ ಬೆಳೆಯುತ್ತಿರುವ ಅಂತಸ್ತು ವರ್ಗ
ಭೇದಕ್ಕೆ ತಳಹದಿ. ವರ್ಗಗಳ ಏರಿಳಿತದಿಂದ ಸಮಾಜದಲ್ಲಿ

ಮಾನತೆ ಆರ್ಥಿಕವಾಗಿ ಭದ್ರರಾಗಿ ಮೇಲ್ವರ್ಗದವರೆನಿಸಿದವರು. ಗೆ ಅನುಕೂಲವಾದ ಸಂಪ್ರದಾಯಗಳನ್ನು ಮಾಡಿಕೊಂಡು ರಣೆಯಲ್ಲಿ ತರುತ್ತಾರೆ. ಆರ್ಥಿಕವಾಗಿ ಅಭದ್ರರಾದ ಕೆಳ ರ್ಗದವರಿಗೆ ದಿನದ ೨ ಊಟಕ್ಕಾಗಿ ದುಡಿದು ಹೊಟ್ಟೆಹೊರೆದು ಳ್ಳುವದೇ ದೊಡ್ಡ ಸಮಸ್ಯೆಯಾದಾಗ ಅನುಕೂಲವಾದಂತೆ ದುಕುವದು ಅವರ ದಾರಿಯಾಗುತ್ತದೆ. ಮೇಲ್ವರ್ಗ, ಕೆಳವರ್ಗ ರಲ್ಲಿರುವ ಎಲ್ಲ ತೊಡಕುಗಳು ಕ್ರೋಢೀಕರಣಗೊಂಡು ಮಧ್ಯಮ ರ್ಗದವರಲ್ಲಿ ಹೊಕ್ಕು ನಿಲ್ಲುತ್ತವೆ. ಇಂಥ ತೊಡಕುಗಳಲ್ಲಿ ಖ್ಯವಾದದ್ದು 'ಮದುವೆ'.

ಮೇಲ್ವರ್ಗದ ಮದುವೆಗಳಲ್ಲಿ ನಡೆಯುವ ಅದ್ದೂರಿಯ ವದ ದುಂದುವೆಚ್ಚದಿಂದ ಕಣ್ಣು ಕುಕ್ಕುವಂತೆ ಮಾಡುವ ಸಡಗರ ನ್ನು ಮಧ್ಯಮವರ್ಗದವರು ತಾವು ಮಾಡಿತೋರಿಸಬೇಕೆಂದು ಹೆಮ್ಮೆಯನ್ನು ಮೈಗೂಡಿಸಿಕೊಳ್ಳಲು ಆರ್ಥಿಕ ಮುಗ್ಗಟ್ಟು. ರ್ಗದವರು ಸಾಲಮಾಡಿದರೂ ನಿಶ್ಚಿಂತೆಯಿಂದ ದುಡಿದು ತ್ತು ಊಟವಿಲ್ಲದಿದ್ದರೂ ನಗುನಗುತ್ತ ದಿನಕಳೆಯುವಂತೆ ಧ್ಯವರ್ಗದವರಿಗೆ ಮಾನಸಿಕ ಸಿದ್ಧತೆ ಇಲ್ಲ. ಅಡಿಗೆ ಮನೆಯಲ್ಲಿ ಗೆ ಡಬ್ಬಿ ಹಾಕಿ ಕಟ್ಟೆಗೆ ಕೂತು ಹರಟಲು ಮಧ್ಯಮವರ್ಗದ ಳೆಯ ಮಾನಸಿಕ ಸ್ಥಿರತೆ ಸಾಲದು. ವೈವಾಹಿಕ ಬಂಧನ ತೆ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಜಾತಿಯ ಕಟ್ಟಳೆ ನ್ನು. ಹಬ್ಬ-ಹರಿದಿನ. ಜಾತ್ರೆ-ನಿಬ್ಬಣಗಳಲ್ಲಿ ಸರಿದೂಗಿಸಿ ಡು ಹೋಗುವ ಸಂಕಟದ ಆಚರಣೆಯ ಚಿಂತೆಗೆ ಆರ್ಥಿಕ ತೆ ಸಾಲದು. ಇಂಥ ಇತ್ತಂಡ ಪರಿಸರವನ್ನು ಸೃಷ್ಟಿಸಿಕೊಂಡು

ತೊಳಲಾಡುವ ಮಧ್ಯಮವರ್ಗದಲ್ಲಿ ಅಂತರ್ಜಾತಿ ಮದು
ಬಿರುಗಾಳಿಯನ್ನೆಬ್ಬಿಸುತ್ತದೆ.

ನಮ್ಮ ಪರಂಪರೆಯಲ್ಲಿ ಭೌತಿಕ ಸಾಧನೆಗಿಂತ ಹೆಚ್ಚಿ
ಗಮನವು ಆಧ್ಯಾತ್ಮಿಕ ಸಾಧನೆಗೆ ಕೊಡಲ್ಪಟ್ಟಿದೆ. ಆಧ್ಯಾತ್ಮದ
ಸಾಧನೆ ಮಾಡುವವನಿಗೆ ವಿವಾಹವು ಅಕ್ಷರಶಃ ಬಂಧನವಾ
ಮಾರ್ಪಡುವದರಿಂದ ಅದರಲ್ಲಿ ತೊಡಗದೆ ದೂರ ಉಳಿದವರ
ಇದ್ದಾರೆ. ಈ ಪರಂಪರೆಯು ಸಂಪ್ರದಾಯವಾಗಿ ಮಾರ್ಪಟ
ಮುಂದಿನ ಅನುಯಾಯಿಗಳು ಕಡ್ಡಾಯವಾಗಿ ಮದುವೆಯಾಗ
ಇರಬೇಕಾಗಿ ಬಂತು. ಆದರೆ ಎಲ್ಲರಿಗೂ ಇಂದ್ರಿಯ ನಿಗ್ರ
ಸಾಧ್ಯವಾಗದ ಮಾತು. ಅಂಥವರು 'ಕಾವಿ' ಬಟ್ಟೆ ಉಟ್ಟು ಕದ
ಕಾಮ ತೃಪ್ತಿ ಪಡೆಯತೊಡಗಿದರು. ಹೀಗೆ ಕದ್ದು ಮಾಡು
ವ್ಯವಹಾರದಲ್ಲಿ ಜಾತಿಯ ಪ್ರಶ್ನೆ ಮೂಡಲೇ ಇಲ್ಲ. ಸ್ವಾ
ಕಿವಿಗೆ ತಾವು ಉಚ್ಚರಿಸುವ ಮಂತ್ರ ಘೋಷಗಳು ಚೀತ್ಕಾರವೆಂ
ಮನೆಯ ಅಂಗಳದಾಚೆಗೆ ಅವರನ್ನು ನಿಲ್ಲಿಸಿದ್ದ ಪುರೋಹಿತ
ಕೂಡ ಶೂದ್ರ ಸ್ತ್ರೀಯರ ಜೊತೆಗೆ ವಿವಾಹವಾಗದೆ ದೇ
ಸಂಪರ್ಕ ಮಾಡಿದ್ದು ತಪ್ಪೆಂದು ಬಗೆಯುತ್ತಿರಲಿಲ್ಲ. ವಿವಾಹ
ಹೊರಗಿನ ಸಂಬಂಧಗಳಿಗೆ ಆಗಲೂ ಈಗಲೂ ಜಾತಿಯು ತೊ
ಕಾಗುವದಿಲ್ಲ !

ಹಣವಂತರು, ಅಧಿಕಾರಿಗಳು 'ಆನೆ ನಡೆದುದೇ ದಾ
ಯೆಂಬಂತೆ ನಡೆಯುತ್ತಲೇ ಇದ್ದಾರೆ. ಅಂದು ಅರಸರು ಮ
ಮರೆ ಇಲ್ಲದೆ ಉಪಪತ್ನಿಯರನ್ನಾಗಿ ಮಾಡಿಕೊಂಡು ಸಾ
ಸಲುಹಿ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಇಂ

ನೌಕರಿ ಕೊಡುವ, ಸಣ್ಣಪುಟ್ಟ ಕೆಲಸ ಮಾಡಿಕೊಡುವ ನೆಪದಲ್ಲಿ ಅಧಿಕಾರಿಗಳು ಜಮೀನ್ದಾರರು ಮದುವೆಯಾಗದ. ಶ್ರೇಷ್ಠ ಕನಿಷ್ಠ ಜಾತಿಯನ್ನು ನೋಡದೆ, ಉಪಾಯ ಬುದ್ಧಿಯಿಂದ, ಹೆಣ್ಣನ್ನು ಭೋಗಿಸುತ್ತಾರೆ. ಆಗ ಅವರು 'ಕುಲಗೆಡುವ' ವಿಚಾರ ಮಾಡುವುದಿಲ್ಲ. ಕುಲಗುರುಗಳೆನಿಸಿಕೊಂಡವರು ಕೂಡ ಇಂಥ ಸಂಬಂಧದಲ್ಲಿ 'ಕುಲಗೆಡದ' ಗುರುಗಳಾಗಿ ಧರ್ಮಬೋಧನೆ ಮಾಡುತ್ತಾರೆ !

ಕಾವಿ, ಖಾದಿ, ಖಾಕಿ ತೊಡುವವರು ಶ್ರೇಷ್ಠವರ್ಗದವರು. ಅವರಿಗೆ ಅವರವರ ಮನೆಯ ಮಟ್ಟಿಗೆ ಮಾತ್ರ ಜಾತಿ ಸಂಬಂಧಿಸುತ್ತದೆ. ಅದು ಕೂಡ ತಾವು ಮದುವೆಯಾಗುವಾಗ, ತಮ್ಮ ಮಕ್ಕಳಿಗೆ ಮದುವೆ ಮಾಡುವಾಗ ಜಾತಿಯ ಬಗೆಗೆ ಚಿಂತಿಸುತ್ತಾರೆ. ಜಾತಿಯ ಹೊರಗ ಹೆಣ್ಣು ತರುವವರಲ್ಲಿ, ಕೊಡುವವರಲ್ಲಿ ಲಾಭ ವಿದ್ದರೆ ಅದಕ್ಕೆ ಹಿಂಜರಿಯುವದಿಲ್ಲ. ಆಗ ಅವರವರ ಅಂತಸ್ತು, ಸಂಪತ್ತು ಮಾತ್ರ ಸಮಾನವಾಗಿದ್ದರೆ ಸಾಕು. ತಮ್ಮ ಪದವಿ ಪಟ್ಟಗಳನ್ನು ಉಳಿಸಿಕೊಳ್ಳಲು ಹೆಣ್ಣು ಕೊಟ್ಟು ಜಾತಿಯನ್ನು ಗೌಣವಾಗಿ ಕಾಣುವವರು ಇದ್ದಾರೆ.

ಹಿಂದಿನ ಅರಸು ಮನೆತನಗಳು ಇಂದಿಗೂ ಮುಂದುವರೆದುಕೊಂಡು ಬಂದಿರುವಾಗ, ಹಿಂದಿನ ವೈಭವ, ಸ್ವಾತಂತ್ರ್ಯವಿಲ್ಲದಿದ್ದರೂ ಅವರು ತಮಗೆ ಸಮಾನವಾದ ಇನ್ನೊಂದು ಅರಸು ಮನೆತನವನ್ನೇ ಮದುವೆಗಾಗಿ ಹುಡುಕುತ್ತಾರೆ. ಮೈಸೂರು ಅರಸರು ಇಂದೋರ, ಭೋಪಾಲ, ಕಾಶ್ಮೀರ ಮೊದಲಾದ ಅರಸುಮನೆತನಗಳಲ್ಲಿ ರಕ್ತಸಂಬಂಧವನ್ನು ಮಾಡಿದ್ದಾರೆ. ಇಲ್ಲಿ ಜಾತಿಗಿಂತ ಮನೆತನವೇ ಮುಖ್ಯ.

ಕೆಳವರ್ಗದವರಿಗೆ ಜಾತಿ–ನೀತಿಯ ಪರಿಕಲ್ಪನೆಗಳ ಬಗೆಗೆ ಚಿಂತಿಸುವಷ್ಟು ವ್ಯವಧಾನವಿರುವದಿಲ್ಲ. ನಿತ್ಯದ ದುಡಿಮೆಯ ಜೀವನದಲ್ಲಿ ಹೊಟ್ಟೆಯ ಹಸಿವಿನಷ್ಟೇ ದೈಹಿಕ ಹಸಿವು ಕಾಡುತ್ತದೆ. ಕೂಡಿ ದುಡಿಯುವ ಸಂದರ್ಭದಲ್ಲಿ ಜಾತಿಗಿಂತ ಅವರಿಗೆ ದೊರೆಯುವ ಸಮಾನ ಕೂಲಿಯೇ ಅವರ ಜಾತಿಯಾಗುತ್ತದೆ. ಅನಾಯಾಸವಾಗಿ ಪುಕ್ಕಟೆಯಾಗಿ ದೊರೆಯುವ ದೈಹಿಕ ತಣಿವು ಮಾತ್ರ ಅವರಿಗೆ ಮುಖ್ಯವಾಗುತ್ತದೆ. ಜಾತಿಯ ಕಟ್ಟಳೆ ಅವರನ್ನು ಕೆಣಕುವದೇ ಇಲ್ಲ. ಮದುವೆಯೊಂದು ನಿರ್ಬಂಧವಾಗಿ ಕಾಡುವದೂ ಇಲ್ಲ.

ಮಧ್ಯಮ ವರ್ಗದವರಿಗೆ ಶ್ರೀಮಂತರ ಹಾಗೆ ಆರ್ಥಿಕ ಬಲವಿಲ್ಲದೆ ಅವರಂತೆ ಸುಖಪಡಲಾರರಾದರೂ ಆ ಸುಖದ ಕಡೆಗೆ ತೀವ್ರ ಸೆಳೆತವಿರುತ್ತದೆ. ಕೆಳವರ್ಗದವರಂತೆ ಸ್ವಾತಂತ್ರ್ಯ ವಹಿಸಲು ಸಾಮಾಜಿಕ ಅಂತಸ್ತಿನ ಆತಂಕ ಜಾತಿ–ನೀತಿಗಳ ಬಗ್ಗೆ ಗೌರವ. ಸ್ವಪ್ರತಿಷ್ಠೆಗಳನ್ನು ಹೊತ್ತು ನರಳುವವರು ಮಧ್ಯಮ ವರ್ಗದವರೇ.

ಮಧ್ಯಮ ವರ್ಗದ ಯುವಕ .ಯುವತಿಯರು ಮೇಲ್ವರ್ಗದವರನ್ನು ಪ್ರೇಮಿಸಿ ಮದುವೆಯಾಗಲು ಬಯಸಿದರೆ ಎಲ್ಲಿಲ್ಲದ ಅಡ್ಡಿ ಆತಂಕಗಳು ಬಂದೊದಗುತ್ತವೆ. ನೀತಿ–ಜಾತಿಗಿಂತ ಹೆಚ್ಚು ಆರ್ಥಿಕ ಅಂತಸ್ತನ್ನು ಪ್ರೀತಿಸುವ ಮೇಲ್ವರ್ಗದವರು ಮಧ್ಯಮ ವರ್ಗದವರೊಡನೆ ನಡೆಯುವ ವಿವಾಹ ಸಂಬಂಧವನ್ನು ಒಪ್ಪಲಾರರು. ಮನೆಯವರ ಒಪ್ಪಿಗೆಗೆ ವಿರೋಧವಾಗಿ ಶ್ರೀಮಂತ–ಮಧ್ಯಮ ವರ್ಗದ ಸಂಬಂಧಗಳು ನಡೆದರೆ ಯಶಸ್ವಿಯಾಗು

ವನು ಅಪರೂಪದ ವಿಷಯ. ಹಣದ ಬಲದಿಂದ ಹಿರಿಯರು ವಿವಾಹಿತರನ್ನು ಅಗಲಿಸಲು ಪ್ರಯತ್ನಿಸುತ್ತಾರೆ. ಆಗದಿದ್ದರೆ ಅವರು ಅನ್ನಾನ್ನಗತಿಕರಾಗಿ ಬೀದಿ-ಬೀದಿ ಅಲೆಯುವಂತೆ ಮಾಡಿ ಮದುವೆ ಮಾಡಿಕೊಂಡದ್ದು ಮಹಾಪರಾಧವೆಂದು ಪಶ್ಚಾತ್ತಾಪ ಪಡುವಂತೆ ಮಾಡುತ್ತಾರೆ. ಅದಕ್ಕೂ ಹಿಂದೆ ಜಗ್ಗದೆ ಜೋಡಿ ಅಗಲದೆ ಉಳಿದರೆ ಕೊನೆಗೆ ಕೊಲ್ಲಲೂ ಹೇಸುವದಿಲ್ಲ.

ನಮ್ಮ ಸ್ವತಂತ್ರ ಭಾರತದಲ್ಲಿ ಸರ್ವರಿಗೂ ಸಮಾನ ಹಕ್ಕುಗಳು ! ಜಾತಿ-ಭೇದ ಮಾಡಬಾರದೆಂದು ಕಾಯ್ದೆ-ಕಾನೂನಿನ ರಕ್ಷಣೆ ಪ್ರಕಟವಾಗಿ ಪ್ರತ್ಯಕ್ಷವಾಗಿ ನೌಕರಿಯ ಸೌಲಭ್ಯ, ಚುನಾವಣೆ, ಮತಗಣನೆ, ಮತೀಯ ಸಂಘಗಳ ಸ್ಥಾಪನೆ-ಮಂತ್ರಿಮಹೋದಯರಿಂದ ಉದ್ಘಾಟನೆ. ಬಂಬಲ ! ಕೆಲವೇ ಜನ ಬಡ ಸಾಹಿತಿಗಳು ಸಮಾಜಸುಧಾರಕರು ಮತಭೇದ ಬೇಡವೆಂದು ಬಾಯಿ ಬಡಿದುಕೊಂಡರೆ ಕೇಳುವವರಾರು ?

ಮಾನವಕುಲ ಚಿಂತಕರು ಮಾತ್ರ ಯಾವ ಕಾಲದಲ್ಲಿಯೂ ಸಾಮಾಜಿಕ ವಿಷಮತೆಯನ್ನು ಜಾತೀಯತೆಯನ್ನು ಪ್ರತಿಭಟಿಸದೇ ಬಿಟ್ಟಿಲ್ಲ. ಬುದ್ಧ, ಬಸವ, ಗಾಂಧಿಯಂಥವರು ಸ್ವತಂತ್ರವಾದಿಗಳಾಗಿ ಸ್ವಾವಲಂಬಿಗಳಾಗಿ ಬದುಕುವ ಸ್ವತಂತ್ರ ಮನೋಭಾವದ, ಮಾನವ ಜಾತಿಯನ್ನು ಬೆಂಬಲಿಸಿದರು. ಗಾಂಧೀಜಿ ಬದುಕಿದ್ದಾಗ ಗಾಂಧೀ ಮದುವೆಯೆಂದು ಪ್ರಸಿದ್ಧಿ ಪಡೆದ ಸರಳವಾದ ಧಾರ್ಮಿಕ ವಿಧಿಗಳನ್ನು ದೂರವಿಟ್ಟು, ಸ್ವತಃ ನೂತು ಮಾಡಿದ ನೂಲಿನ ಹಾರಗಳ ವಿನಿಮಯದ ಮದುವೆ ನೋಂದಣಿ ಮಾಡುವ ಮದುವೆಯಂತೆ ನಡೆಯುತ್ತಿತ್ತು. ಇದೀಗ ಗಾಂಧೀ ಮದುವೆಯು ನೆನಪು ಮರೆಯಾಗುತ್ತ ನಡೆದಿದೆ.

ನಮ್ಮ ಜೊತೆಗೆ ಬಾಳುತ್ತಿರುವ ಎರಡು ದಶಕದ ಹಿಂದಿನ ಮತ್ತು ಈಗಿನ ಅಂತರ್ಜಾತಿ ವಿವಾಹಿತರ ಕೆಲವು ಉದಾಹರಣೆಗಳನ್ನು ನೋಡುವದು ಉಚಿತ.

ಮಧ್ಯಮ ವರ್ಗದ ಸಾರಸ್ವತ ಬ್ರಾಹ್ಮಣರ ಹುಡುಗಿಯನ್ನು ಪ್ರೇಮಿಸಿ ಲಿಂಗಾಯತ ಹುಡುಗನು ನಾಲ್ಕು ದಶಕಗಳ ಹಿಂದೆ ಮದುವೆಯಾಗಿದ್ದನು. ಹುಡುಗಿಗೆ ದೀಕ್ಷೆ ಕೊಟ್ಟು ಲಿಂಗಧಾರಣೆ ಮಾಡಿಸಿ ಸಮಾಜದವರು ಅವರ ಕೈ ಬಿಟ್ಟರು. ಪ್ರಕೃತಿ ಧರ್ಮದಂತೆ ಒಂದು ಹೆಣ್ಣು ಒಂದು ಗಂಡು ಮಗುವನ್ನು ಅವರು ಪಡೆದರು. ಸರೀಕರು ಸರಿ–ಸಮಾನರಂತೆ ಅವರನ್ನು ಕಾಣದೇ ಹೋದಾಗ ಗಂಡನಾದವನು ಅಡ್ಡದಾರಿಗಳಿಂದ ಹಣ ಸಂಪಾದಿಸಿ ಶ್ರೀಮಂತನಾದನು. ಅವರ ಮಗಳಿಗೆ ಮೂರು ದಶಕಗಳು ಸಂದವು. ಇಬ್ಬರೂ ಮಕ್ಕಳಿಗೆ ಹೆಚ್ಚಿನ ವ್ಯಾಸಂಗ ಮಾಡಿಸಿದರು. ಬೇಕಾದಷ್ಟು ಸಂಪತ್ತನ್ನು ಮಗಳಿಗೆ ಕೊಡುವ ತಂದೆಯಿದ್ದರೂ ಅಳಿಯನನ್ನು ದೊರಕಿಸುವದು ಕಷ್ಟದ ಕೆಲಸವಾಯಿತು. ಕೊನೆಗೆ ಮಕ್ಕಳನ್ನು ಪರದೇಶಕ್ಕೆ ಕಳಿಸಲು ತಂದೆ ತಾಯಿ ಯೋಚಿಸಿದರು. ಪರದೇಶದಲ್ಲಿ ಅದೇ ಪರಿಸ್ಥಿತಿಯನ್ನನುಭವಿಸಿದವರನೊಬ್ಬ ಅವಳಿಗೆ ದೊರೆತ ಮೇಲೆ ತಂದೆ-ತಾಯಿ ಮದುವೆ ಮಾಡಿಕೊಟ್ಟರು. ಆಗ ಕನ್ಯೆ ಮೂರುವರೆ ದಶಕ ದಾಟಿದ್ದಳು.

ಬಾಲ್ಯದಲ್ಲಿ ಶ್ರೀಮಂತಿಕೆ ಅಳಿದು ಬಡತನಕಾಲಿಟ್ಟರೂ ಜೀವಿಸುವ ಹಂತದಲ್ಲಿ ಮಧ್ಯಮವರ್ಗದವರಂತೆ ಉಳಿದ

ಮನೆಯವರ ಮಗಳೊಬ್ಬಳು ಜಾತಿಯಿಂದ ಗಿರಿಜನಳಾದರೂ ವಿದ್ಯೆಯಲ್ಲಿ ಆಸಕ್ತಿವಹಿಸಿ ಉನ್ನತ ಶಿಕ್ಷಣ ಪಡೆದು ಶ್ರೇಷ್ಠ ಕುಲದವನನ್ನು ಪ್ರೀತಿಸಿದಳು. ಮದುವೆಯಾದರು. ಅವರ ವಿದ್ಯಾರ್ಹತೆ, ಅಧಿಕಾರದಿಂದ ಸಮಾಜದಲ್ಲಿ ಗೌರವದ ಸ್ಥಾನ ಗಳಿಸಿದ್ದರೂ ಅವರ ಹೆಣ್ಣುಮಕ್ಕಳ ಮದುವೆ ಸಮಸ್ಯೆಬಂದಾಗ ಬಿಡಿಸಲಾಗದ, ಪರಿಹರಿಸಲಾಗದ ನೋವನ್ನು ಅನುಭವಿಸುತ್ತಿದ್ದಾರೆ.

ಅಂತರ್ಜಾತೀಯ ವಿವಾಹಿತರು ಮಕ್ಕಳು ಶಾಲೆಗೆ ಹೋಗಲು ತೊಡಗಿದಕೂಡಲೇ ಹೊಸ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮಕ್ಕಳ ತಿಳಿಯಾದ ಮನಸ್ಸಿನಲ್ಲಿ ಜಾತಿಯ ಭೂತ ಹೊಕ್ಕು ಕಾಡತೊಡಗುತ್ತದೆ. ಹೆಸರು ಹಚ್ಚುವಾಗ ಹಿಂದು ಬರೆದರೆ ಸಾಲದೆ ಕಂಸಿನಲ್ಲಿ ಉಪಜಾತಿ ಬರೆಯುವ ರೀತಿಯ ಪರಿಣಾಮದಿಂದ ಶಿಕ್ಷಕರಲ್ಲಿ ಮಕ್ಕಳಲ್ಲಿ ಅಪ್ರತ್ಯಕ್ಷವಾಗಿ ಜಾತಿ ಕೆಲಸಕ್ಕೆ ತೊಡಗುತ್ತದೆ. ಇತ್ತೀಚೆಗೆ ಜಾತಿಯ ಕಾಲಂವನ್ನು ಹೆಸರು ಹಚ್ಚುವಾಗ ಕಡ್ಡಾಯಗೊಳಿಸದಿದ್ದರೂ, ಶಾಲೆ ಬಿಡುವಾಗ ಕೊಡುವ ಪ್ರಮಾಣಪತ್ರದಲ್ಲಿ ಅದು ಇದ್ದೇ ಇರುತ್ತದೆ.

ಮಕ್ಕಳಿಗೆ ತಂದೆಯ 'ಜಾತಿ' ಹುಟ್ಟಿನಿಂದ ಬರುವುದನ್ನು ನಮ್ಮ ದೇಶದ ಕಾನೂನು ಒಪ್ಪುತ್ತದೆ. ಪುರುಷ ಪ್ರಧಾನತೆಯನ್ನು ಒಪ್ಪುವ ನಮ್ಮ ಸತ್ ಸಂಪ್ರದಾಯದಲ್ಲಿ ಗಂಡನ ಜಾತಿಯನ್ನು ಹೆಂಡತಿ ಅನುಸರಿಸಬೇಕು, ಮಕ್ಕಳಿಗೂ ಅದನ್ನೇ ಆರೋಪಿಸಬೇಕು. ಆದರೆ ಇತ್ತೀಚೆಗೆ ನಡೆದ ನ್ಯಾಯಾಲಯದ ಕಟ್ಟೆ ಹತ್ತಿದ ಒಂದು

ಘಟನೆಯು ವಿಚಿತ್ರವಾಗಿದೆ. ಹಿಂದುಳಿದ ವರ್ಗಕ್ಕೆ ಸೇರಿದ ಗಂಡನನ್ನು ಮದುವೆಯಾದ ನೌಕರಿಯಲ್ಲಿದ್ದ ಮಹಿಳೆಯೊಬ್ಬಳು ಸರಕಾರದ ನೀತಿಯಂತೆ 'ಬಡತಿ'ಗಾಗಿ ಕೋರಿಕೆ ಸಲ್ಲಿಸಿದಳು. ಮೀಸಲಾತಿಯ ನಿಯಮದಂತೆ ಅವಳಿಗೆ ದೊರೆಯಬೇಕಾದ ಬಡತಿಯನ್ನು ಸರಕಾರವು ಕೊಡಲಿಲ್ಲ. ನ್ಯಾಯಾಲಯದ ಮೊರೆ ಹೊಕ್ಕ ಅವಳಿಗೆ ಅಲ್ಲಿ ದೊರೆತ ನ್ಯಾಯ "ಬಡತಿಗಾಗಿ ಗಂಡನ ಜಾತಿಯನ್ನು ಅವಳಿಗೆ ಅನ್ವಯಿಸಲಾಗುವುದಿಲ್ಲ" ವೆಂದು!

ಜೀವನ ನಿರ್ವಹಣೆಯಲ್ಲಿ ಮೊದಲ ಸಮಸ್ಯೆ ಉದರ ಪೋಷಣೆ ಈ ವಿಷಯದಲ್ಲಿ ಸ್ವಾವಲಂಬಿಗಳಾಗದೇ ಹೋದ ಅಂತರ್ಜಾತಿ ವಿವಾಹಿತರು ಸಮಾಜದಲ್ಲಿ ತೀರ ಹೀನ ಅವಸ್ಥೆಗಿಳಿಯಬೇಕಾಗುತ್ತದೆ. ಅಂತರ್ಜಾತಿ ವಿವಾಹಕ್ಕೆ ಮೊದಲು ನೌಕರಿಯಲ್ಲಿದ್ದರೆ ಅವರಿಗೆ ತೊಂದರೆಯಾಗಲಿಕ್ಕಿಲ್ಲವೆಂಬ ಭಾವನೆಯು ತಪ್ಪು. ನಮ್ಮ ದೇಶದಲ್ಲಿ ಅನೇಕ ಸಂಸ್ಥೆಗಳು ಸ್ವತಂತ್ರವಾಗಿ ಹುಟ್ಟಿ ವಿವಿಧೋದ್ದೇಶಗಳನ್ನು ಈಡೇರಿಸಿಕೊಂಡು ಬರುತ್ತಿವೆ. ಸರಕಾರಕ್ಕಿಂತ ಹೆಚ್ಚಿನ ಪ್ರಭಾವ ಈ ಸಂಸ್ಥೆಗಳ ಕೈಯಲ್ಲಿದೆ. ಅಲ್ಲಿ ಕೆಲಸದಲ್ಲಿರುವ ವಿವಾಹಿತರು ಆಡಳಿತ ವರ್ಗದವರ ಮರ್ಜಿ ಕಾಯಬೇಕಾಗುತ್ತದೆ. ಅದರಲ್ಲೂ ಮಹಿಳೆ ವಿಶೇಷವಾಗಿ ಹೆಚ್ಚಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವಳು ಕೆಲಸಮಾಡುವ ಸಂಸ್ಥೆಯ ಆಡಳಿತ ವರ್ಗದವರು ಇಚ್ಛೆಗೆ ವಿರೋಧವಾಗಿ ತನಗೆ ಬೇಕಾದಂತೆ ಮದುವೆಯಾಗಲು ಹವಣಿಸಿದರೆ ಅವಳ ಬಾಳಿನ ಇತಿಶ್ರೀಯಾದಂತೆಯೇ ಮದುವೆಗೆ ಬಾಹಿರವಾದ ಕಾಮುಕೇಳಿಗೆ ವಿರೋಧಿಯಾಗಿ ವರ್ತಿಸಿದರೆ ಆಡಳಿತ ವರ್ಗದ ಕೈಯಿಂದ ಅವಳು ಪಾರಾಗುವುದು ಹುಲಿಯ ಬಾಯಿಂದ ಹೊರಬಂದಂತೆ. ದುಃಸ್ಸಾಹಸ ಮಾಡಿ ಶೀಲ ಕಾಪಾಡಿ

ಕೊಂಡು ಗಂಡನಿಗೆ ನಿಷ್ಠಳಾಗಿ ಬದುಕಬಯಸುವ ಮಹಿಳೆಯ ಬಾಳು ಮುಳ್ಳಿನ ಹಾಸಿಗೆಯಾಗುತ್ತದೆ. ಓದು ಅಥವಾ ನೌಕರಿ ಹಿಡಿದನ್ನೂ ಕೂಡಿ ಬಾಳಿಕೊಳ್ಳಬಹುದು. ನೌಕರಿ ಬಿಟ್ಟು ಮನೆಯಲ್ಲಿ ಬಾಳದು ಗಂಡನ ಮನೆಯಲ್ಲಿ ಕಾಲಕಳೆಯಬೇಕೆಂದರೆ ಅವನಿಗಾದರೂ ನೌಕರಿಯಲ್ಲಿ 'ಬಾಳಿಯುಗೊಟ್ಟಿರಬೇಕೇ'? ಅತ್ತ ದರಿ ಇತ್ತ ಪುಲಿ ಯೆನ್ನುವ ದಾರಿಯಲ್ಲಿ ಅವಳು ಸಾಗಬೇಕಾಗುತ್ತದೆ. ಇಂಥ ಪರಿಸ್ಥಿತಿಯು ಇಂದು ಹಲವಾರು ಕಥೆಗಾರರಿಗೆ ಆಹಾರವಾಗಿದೆ. ಸಿನಿಮಾ ಮಾಧ್ಯಮದಲ್ಲಿ ಪ್ರಧಾನಪಾಲಿ ವಸ್ತುವಾಗಿದೆ.

ಪರಿಸ್ಥಿತಿಗೆ ದಾಸನಾಗಿ ಗಂಡನೇ ಹೆಂಡತಿಯನ್ನು ಅವಳಿಗಿಷ್ಟ ವಿಲ್ಲದ ದಾರಿಗೆಳೆಯುವವರೂ ಇದ್ದಾರೆ. ನಂತರ ಅಪಮಾನಕ್ಕೆ ಗುರಿ ಮಾಡುವವರೂ ಇದ್ದಾರೆ. ಪರಿಸ್ಥಿತಿಗೆ ಹೊಂದಾಣಿಕೆ ಮಾಡಿ ಕೊಳ್ಳಲು ಕೆಲವು ಮಹಿಳೆಯರು ದ್ವಿಪಾತ್ರಮಾಡುವವರೂ ಇದ್ದಾರೆ. ನಮ್ಮ ದೇಶದ ಎಲ್ಲ ಮಹಿಳೆಯರ ಮೇಲೆ ನಡೆಯುವ ದಬ್ಬಾಳಿಕೆಯಾಗಿದ್ದರೂ ಅಂತರ್ಜಾತಿ ವಿವಾಹಿತರಿಗೆ ಅವರ ಮನೆತನಗಳ ಬೆಂಬಲವಿಲ್ಲದ ಕಾರಣ ವಿಶೇಷವಾಗಿ ದುಷ್ಪರಿ ಣಾಮ ಬೀರುತ್ತದೆ.

ಎಲ್ಲ ಪರಿಸ್ಥಿತಿಗಳನ್ನು ಮೀರಿ ಪತಿಪತ್ನಿಯರು ಸುಖಿವಾಗಿರ ಬೇಕೆಂದರೆ—ಆರ್ಥಿಕಮುಗ್ಗಟ್ಟಿನ ಹೊಡೆಗಾದಾಗ ಜಗ್ಗದ ಆಡಳಿತ ವರ್ಗವು ಅವರನ್ನು ಹಿಂಸಿಸಿ ಪಾಶವೀ ಆನಂದಪಡುತ್ತದೆ. ಹೀಗೆ ಅನೇಕರ ಜೀವನವನ್ನು ಹಾಳುಗೆಡಹಿದ ಉದಾಹರಣೆಗಳು ಇಂದು ನಮ್ಮ ಸುತ್ತಲೂ ಹಬ್ಬಿರುವುದು ನಿಚ್ಚಳವಾಗಿ ಕಾಣುತ್ತದೆ.

ಮಾನವನು ಸಾಮಾಜಿಕ ಪ್ರಾಣಿಯಾಗಿ ಸಮಾಜದಲ್ಲಿ ಸಹ ಜೀವನ ನಡೆಸಲೇ ಬೇಕಾಗುತ್ತದೆ. ಇಲ್ಲಿ ಅಂತರ್ಜಾತಿ ವಿವಾಹಿತರಿಗೆ ಮತ್ತೊಂದು ರೀತಿಯ ಹಿಂಸೆ ಕಾದಿರುತ್ತದೆ. ಅಂತರ್ಜಾತಿ ಅಥವಾ ವಿಜಾತಿ ವಿವಾಹಿತರಲ್ಲಿ ಕೀಳರಿಮೆ ಬೆಳೆಯುವಂತೆ ಆಚರಣೆಗೆ ತೊಡಗುತ್ತಾರೆ. ಹಬ್ಬ–ಹರಿದಿನ, ಪೂಜೆ–ಪುರಸ್ಕಾರ, ಅರಿಶಿನ, ಕುಂಕುಮ, ಮದುವೆ–ಮುಂಜಿವೆ ಕಾರ್ಯಕ್ರಮಗಳನ್ನು ನೆರವೇರಿಸುವಾಗ ಮುತ್ತೈದೆಯಾಗಿ ಓಡಾಡುವ ಮಹಿಳೆಯರಲ್ಲಿ ಅಂತರ್ಜಾತಿಯವರನ್ನು ದೂರವಿಡುತ್ತಾರೆ. ಅವರಿಗೆ ಉಡಿ ತುಂಬಿದರೆ, ಒಂದತ್ತು ಇಟ್ಟರೆ ತಮ್ಮ ಜಾತಿ ಹೋಗುತ್ತದೆಯೆಂಬಂತೆ, ಕೆಡುತ್ತದೆಯೆಂಬಂತೆ ಅವರನ್ನು ಯಾತಕ್ಕೂ ಮುಂದೆ ಕರೆಯುವದಿಲ್ಲ. ಇದು ಮಹಿಳೆಯರನ್ನು ಮಾನಸಿಕವಾಗಿ ಹಿಂಸೆಗೊಳಗುಮಾಡುತ್ತದೆ. ಹೀಗೆ ಹೆಂಗಸರು ಕೂಡಿ ನೆರವೇರಿಸುವ ಕಾರ್ಯಕ್ರಮಗಳಲ್ಲಿ ತಮಗೆ ಅಪಮಾನವಾಗುವುದನ್ನು ಸಹಿಸದೆ ತಮ್ಮ ಮನೆಯಲ್ಲಿ ಉಳಿಯುವ ಮಹಿಳೆಯರು ಗೃಹಕಲಹಕ್ಕೆ ಕಾರಣರಾಗುತ್ತಾರೆ. ಇದರಿಂದ ಮನೆಯಲ್ಲಿ, ಮನದಲ್ಲಿ ಅಶಾಂತಿ ಅತೃಪ್ತಿಗಳು ಮೂಡಿ ದಿನಗಳೆಯುವುದು ದುರ್ಬಲವಾಗುತ್ತದೆ. ಮತ್ತೆ ಕೆಲವು ಮಹಿಳೆಯರು ಚಲನಚಿತ್ರಗಳಿಗೆ ಮತ್ತಿತರ ಚಟಗಳಿಗೆ ಶರಣಾಗಿ ದುಂದುವೆಚ್ಚಕ್ಕೆ ತೊಡಗುವದರಿಂದ ಆರ್ಥಿಕ ಮುಗ್ಗಟ್ಟಿಗೆ ಕಾರಣರಾಗುತ್ತಾರೆ. ಇಂಥ ಪರಿಸ್ಥಿತಿಯು ಗಂಡಹೆಂಡಿರಲ್ಲಿ ವಿಪರೀತಕ್ಕೆ ಹೋದಾಗ ವಿವಾಹ ವಿಚ್ಛೇದನಕ್ಕೆ ಪುಷ್ಟಿದೊರೆಯುತ್ತದೆ. ಇಲ್ಲಿ ಕೂಡಾ 'ಗಂಡ ಬಿಟ್ಟ ಹೆಣ್ಣು' ಎಂದು ಮಹಿಳೆಗೆ ಮಾತ್ರ ಅಪಕೀರ್ತಿ, ಅಪವಾದ.

ಮಕ್ಕಳಿಗೆ ಮುಂದೆ ನಮ್ಮ ಸಮಾಜದಲ್ಲಿ ಸ್ಥಾನ ಸಿಗದ ಕಾರಣ. ...ಪ್ರಭಾವ. ಪ್ರೀತಿ ಬೆಳಸುವುದರಿಂದ ಆಗುವುದು. ಹೆಣ್ಣು ಹುಟ್ಟಿದರೆ ಹಣ್ಣು ಹುಟ್ಟಿದಂತೆಯೆಂಬ ತಿಳುವಳಿಕೆ ಸಾಧ್ಯವಾಗಿಲ್ಲ. ವರದಕ್ಷಿಣೆಯು ನಾಗರ ಹುಟ್ಟಿದಂತೆ ಹೆಣ್ಣು ಹೆತ್ತ ತಂದೆ-ತಾಯಿಯರಿಗೆ ಹುಟ್ಟಿದಲ್ಲಿ ಹೆಣ್ಣು ಹುಟ್ಟಿದಹಾಗೆಯೇ ಸರಿ. ಅಂತರ್ಜಾತಿ ವಿವಾಹಕ್ಕೆ ಅಣಿಯಾದವರು ಪ್ರೇಮಿಗಳಾದ ಕಾರಣ ಈ ಸಮಸ್ಯೆ ಪ್ರತ್ಯಕ್ಷವಿರುವುದಿಲ್ಲ. ಕೈತುಂಬ ವರದಕ್ಷಿಣೆ ತರುವ ಸೊಸೆಯನ್ನು ಬಯಸುವ ವರನ ತಂದೆ-ತಾಯಿಗಳಿಗೆ ಅಂತರ್ಜಾತಿ ಸೊಸೆ ದೊಡ್ಡ ಆಘಾತ ಮಾಡುತ್ತಾಳೆ. ಅವಳನ್ನು ತಮ್ಮ ಮನೆತನದ ...ರಿಯಂತೆ ಕಾಲುಗಾರಿಕೆಯಂತೆ ಕಂಡು ಕಾಡುತ್ತಾರೆ.

ಅಂತರ್ಜಾತಿ ವಿವಾಹ ಮಾಡಿಕೊಳ್ಳುವುದರಲ್ಲಿ ಒಂದೇ ಜಾತಿಯಲ್ಲಿರುವ ಒಳಪಂಗಡಗಳು ಕೂಡ ಅಂತರ್ಜಾತಿಯೆನಿಸುತ್ತವೆ. ಬ್ರಾಹ್ಮಣ. ಲಿಂಗಾಯತ. ಜೈನ. ಸಿಖ್, ವೈಶ್ಯ. ಕ್ಷತ್ರಿಯ ಮೊದಲಾದ ಹಿಂದೂಧರ್ಮಗಳಲ್ಲಿ ಅನೇಕ ಒಳ ಜಾತಿಗಳಿರುವುದರಿಂದ ಪರವರ ಒಳಪಂಗಡಗಳನ್ನು ಕೂಡ ಅಂತರ್ಜಾತಿಯೆಂದು ತಿಳಿಯುವಷ್ಟು ಸಂಕುಚಿತ ಮನೋವೃತ್ತಿಯವರಾಗಿದ್ದಾರೆ. ನಮ್ಮ ಜನರು ಜೈನ. ಲಿಂಗಾಯತ. ಬ್ರಾಹ್ಮಣರಲ್ಲಿಯ ಹೆಣ್ಣು-ಗಂಡುಗಳ ಸಾಮಾನ್ಯವಾದ ಆಚಾರ-ವಿಚಾರಗಳಲ್ಲಿ ಕೆಲವು ವ್ಯತ್ಯಾಸವಿರುವುದನ್ನು ಮುಂದುಮಾಡಿ ಬೆದರಿಸುತ್ತಾರೆ. ಹಿಂದು-ಮುಸ್ಲಿಮ್ ಕ್ರಿಶ್ಚಿಯನ್ ಅಂತರ್ಜಾತಿಯ ಮದುವೆಯಲ್ಲಿ ದೊಡ್ಡ ದೊಡ್ಡ ಘರ್ಷಣೆಗಳು ಉಂಟಾಗುತ್ತವೆ. ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮಗಳಲ್ಲಿ ಧರ್ಮಾಭಿಮಾನವು ತೀವ್ರವಾಗಿರುವುದರಿಂದ ಅವರು ಮತಾಂತರ ಮಾಡಿಕೊಂಡು ಬಿಡುತ್ತಾರೆ. ಅದರಿಂದ ಜಾತಿಯ

ಪ್ರಸಾರವನ್ನು ಧ್ಯೇಯವಾಗಿಟ್ಟುಕೊಂಡು, ಅದೇ ದಿಕ್ಕಿನಲ್ಲಿ ವಿವಾಹದ ಬಲೆ ಬೆಸೆಯುವವರೂ ಇದ್ದಾರೆ. ಹಿಂದೂಗಳಲ್ಲಿ ಲಿಂಗಾಯತ ಧರ್ಮವನ್ನು ಆಚಾರದಲ್ಲಿ ಕೂಡ ಎಲ್ಲರೂ ಅನುಸರಿಸಲು ಅನುಕೂಲವಿರುವುದರಿಂದ ದೀಕ್ಷೆಕೊಟ್ಟು ಹೆಣ್ಣಾಗಲಿ-ಗಂಡಾಗಲಿ ಮತಾಂತರವಾಗುವದು ಸುಲಭದ ಕಾರ್ಯವಾಗುತ್ತದೆ. ಜೈನ ಬ್ರಾಹ್ಮಣರಲ್ಲಿ ಹೆಣ್ಣಿಗೆ ಧಾರ್ಮಿಕ ಹಕ್ಕುಗಳಿಲ್ಲ-ಆಚರಣೆಯು ಇಲ್ಲದಲ್ಲಿ ದೀಕ್ಷೆ ಕೊಟ್ಟು ಹಿಂದೂ ಮಾಡಿಕೊಂಡಿದ್ದೇವೆಯೆಂದು ಹೇಳಿದರೂ ಅದು ಅರ್ಥ ಕಳೆದುಕೊಳ್ಳುತ್ತದೆ. ಅಂಥವರ ಮಕ್ಕಳ ಮದುವೆಕೂಡ ಸಮಸ್ಯಾದಾಯಕವಾಗಿರುವ ಕಾರಣ ಅಂತರ್ಜಾತಿ ವಿವಾಹಕ್ಕೆ ಹಿಂದೇಟು ಹಾಕುವದು ಸ್ವಾಭಾವಿಕವಾಗುತ್ತದೆ.

ಮೊದಮೊದಲು ಮಾಂಸಾಹಾರ ಶಾಖಾಹಾರಗಳಿಂದಲೂ ಅಂತರ್ಜಾತಿ ವಿವಾಹದಲ್ಲಿ ತೊಡಕಾಗುತ್ತಿತ್ತು. ಇತ್ತೀತ್ತಲಾಗಿ ಆದೊಂದು ದೊಡ್ಡ ಸಮಸ್ಯೆಯಾಗಿ ಉಳಿದಿಲ್ಲ. ಆದರೆ ಒತ್ತಾಯಯಿಂದ ಮತಾಂತರ ಮಾತ್ರ ಅಹಿತಕಾರಿ. ಜಾತಿಯು ಕಟ್ಟುಪಾಡಿರುವದರಿಂದ ಹುಟ್ಟುವ ಮತಾಂತರವನ್ನು ತಗೆದುಹಾಕಿ ಸರಕಾರ ಸಮಾಜ ಅವಕಾಶ ಕಲ್ಪಿಸಬೇಕು. ಹಾಗೆ ಮತಾಂತರಕ್ಕೆ ಒಪ್ಪದ ಮಹಿಳೆಯಮೇಲೆ ಅತ್ಯಾಚಾರ ಅನಾಚಾರ ನಡೆಯುವದು ಸಹಜವೆಂಬಂತಾಗಿದೆ. ಇತ್ತೀಚೆಗೆ ಹೆಚ್ಚುತ್ತಿರುವ ಕೆಲವು ಉದಾಹರಣೆಯಿಂದ ಅದು ಸ್ಪಷ್ಟವಾಗಿ ಬೆಳಕಿಗೆ ಬರುತ್ತದೆ.

ನಮ್ಮ ದೇಶದ ಅನೇಕಜನ ಬಡತನ ವರದಕ್ಷಿಣೆಯ ಸಮಸ್ಯೆಯಿಂದ ಮಕ್ಕಳ ಮದುವೆಮಾಡದೆ ಇದ್ದಾಗ ತೆರವು ಕೊಟ್ಟು

ಂದುವೆ ಮಾಡಿಕೊಂಡು ಹೋಗುವವರು ಸಕ್ಕರೆ ಬೇಡವೆಂದಾರೆ? ರಬ ದೇಶದ ಶ್ರೀಮಂತರು ಕೈಗೆ ಬಂದಷ್ಟು ಹಣ ತೆತ್ತು, ನಮ್ಮ ಣ್ಣುಗಳನ್ನು ಕೊಂಡು ಮದುವೆ ಹೆಸರಿನ ಮೋಸ ಮಾಡಿ ಮ್ಮ ದೇಶಕ್ಕೆ ಒಯ್ಯುತ್ತಾರೆ. ಹಾಗೆ ಕರೆದೊಯ್ಯುವ ಗಂಡಿಗೆ ಮ್ಮ ಮಗಳು ಎಷ್ಟನೆಯ ಹೆಂಡತಿಯೆಂಬ ಕಲ್ಪನೆಯೂ ಇಲ್ಲದೆ; ಣದ ರುಚಿ ನೋಡಿ ಮಗಳನ್ನು ಕಳಿಸುವ ತಂದೆ–ತಾಯಿಯರಿಗೆ ೆ ಮಗಳು ಮತ್ತೆ ಇವರ ಮುಖನೋಡುವ ಪ್ರಸಂಗ ಬರದೇ ೋದದ್ದೇ ಬಹಳ. ಮಗಳು ಸುಖವಾಗಿದ್ದಾಳೆಯೆಂದು ಕಲ್ಪನೆ ಟ್ಟುವದೇ ಹೆಚ್ಚು ಮಂದಿ. ಇತ್ತಿತ್ತಲಾಗಿ ಕೆಲವು ಮಹಿಳೆಯರು ಂತಿರುಗಿ ಬರುತ್ತಿರುವದರಿಂದ ಇಂಥ ಮೋಸದ ಕಥೆ ಬಯಲಿಗೆ ಂದದ್ದು. ಈ ಮುದ್ಯರಿಗಳು ಆರೋಗ್ಯ–ಆಯುಷ್ಯ ಕಳೆದು ೊಂಡು ಮತ್ತೆ ತಂದೆ–ತಾಯಿಗೆ ಭಾರ ಹೊರಿಸುವವರೇ. ಈ ಂದವಸ್ಥೆಗೆ ನಮ್ಮ ಸಮಾಜ ಪದ್ಧತಿಯಲ್ಲಿ ಬೆಳೆದಿರುವ ವರದ ಕ್ಷಿಣೆಯ ಪಿಡುಗು. ಬಡತನದ ಮಹಾರೋಗವೇ ಕಾರಣ. ದು ಹೆಚ್ಚಾಗಿ ಆರ್ಥಿಕವಾಗಿ ಕೆಳವರ್ಗದಲ್ಲಿಯೇ ನಡೆಯುವ ್ಯವಹಾರವಾಗಿ ಅಂತರ್ಜಾತಿಯ ವಿವಾಹದ ಪಟ್ಟಿಗಟ್ಟಿಸಿ ೊಂಡಿಲ್ಲ.

ಜಾತಿಯ ಹಣೆಪಟ್ಟಿಯಿಂದಲೇ ಗುರುತಿಸಲ್ಪಡುವ ಮಕ್ಕಳು ಾತ್ಯಾತೀತ ರಾಷ್ಟ್ರದ ಉತ್ತಮ ಪ್ರಜೆ" ಯಾಗಬಲ್ಲರೆ? ಗಂಡನ ಾತಿ ಹೆಂಡತಿಗೆ ಬರದೆ ಮಕ್ಕಳಿಗೆ ತಗಲುವದು ಹೇಗೆ? ಅಂತರ್ ಾತಿ ವಿವಾಹಿತರ ಮಕ್ಕಳು ತಂದೆಗೆ ಮಾತ್ರ ಮಕ್ಕಳಾಗಿ ತಂದೆಯ ಾತಿಯನ್ನೇ ಏಕೆ ಹೇಳಬೇಕು ? ತಾಯಿಯ ಕುಲ–ಶೀಲ ಕ್ಕಳಿಗೆ ಸೋಂಕುವದಿಲ್ಲವೇ ? ಹಣ ಅಧಿಕಾರಗಳೇ ಶ್ರೇಷ್ಠಜಾತಿ

ಹೊಂದು ಎಲ್ಲಕಾಲಕ್ಕೂ ಮನ್ನಿಸಿದಂತೆ ಅದೇ ಅನೇಕಗುಂಪನ್ನು ಹಿಡಿದು ಜಾತಿಯ ತೊಡಕು ಬಿಡಬಾರದೇಕೆ? ಸ್ವಸಾಮರ್ಥ್ಯದಿಂದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಧನೆಗೈದು ತತ್ತ್ವಸಂದರ್ಶಿಯಾಗುವ ಬದಲು ತತ್ತ್ವನೇತ್ರವನ್ನೇ ಒಂದು "ಜಾತಿ"ಯ ಬಂಧನಕ್ಕೆ ಸಿಲುಕಿ ಸುವದೇಕೆ? ಧರ್ಮವು ಹುಟ್ಟಿನಿಂದಲ್ಲ ಸಾಧನೆಯಿಂದ ಸಾಧಿತ ವಾಗುವದೆಂದು ತಿಳಿದಿದ್ದರೂ ವಿವಾಹ ಸಂಬಂಧಕ್ಕೆ ಮಾತ್ರ ಅದನ್ನು ಎಳೆತರುವದೇಕೆ? ಧರ್ಮದ ಉನ್ನತ ಧ್ಯೇಯಗಳೊಂದಿಗೆ ಅರ್ಥೈಸುವ ಬದಲು ವ್ಯರ್ಥ ಗೊಂದಲಗಳಿಗೆ ಕಾರಣೀಭೂತ ರಾಗುವದರಲ್ಲಿ ಸಾರ್ಥಕ್ಯವೇನಿದೆ ?

ಬಸವ, ಸರ್ವಜ್ಞ, ಗಾಂಧೀಜಿಯವರು ಜಾತೀಯತೆಯನ್ನು ತೊಡೆಯಲು ತೋರಿದ ದಾರಿ ಸಾಮಾಜಿಕರಿಂದ ಪುರಸ್ಕೃತಗೊಂಡು ಬಳಕೆಯಲ್ಲಿ ಬರಲಿಲ್ಲ. ಸರಕಾರವು ಆ ದಿಕ್ಕಿನಲ್ಲಿ ಕೆಲಸಮಾಡಲಿಲ್ಲ. ಅಂಥದೊಂದು ಹೊಸ ಆಯಾಮ ಸೃಷ್ಟಿಸಲು ಈ ಶತಕದ ಅಂಚಿನಲ್ಲಿ ಪ್ರಯತ್ನಗಳು ಬಹಳಷ್ಟು ಕ್ಷೀಣಿಸಿರುತ್ತವೆ.

೭. "ವರದಕ್ಷಿಣೆ"ಯೆಂಬ ಪಿಡುಗಿನ ಪರಿಹಾರ

ವರದಕ್ಷಿಣೆ ತರಲಿಲ್ಲವೆಂಬ ಕಾರಣದಿಂದ ಅತ್ತೆಯರ ಕಾಟ[ಕ್ಕೆ] ನೂರಕ್ಕೆ ಐವತ್ತರಷ್ಟು, ಗಂಡಂದಿರ ಕಾಟಕ್ಕೆ ನೂರಕ್ಕೆ ನಾಲ್ವತ್ತರಷ್ಟು ಭಾವಮೈದುನರ ಕಾಟದಿಂದ ನೂರಕ್ಕೆ ಇಪ್ಪತ್ತರಷ್ಟು [illegible] ನಾದಿನಿಯರು ಮಾನಸಿಕ ಕೋಲಾಹಲ ತಡೆಯದೆ ಆತ್ಮಹತ್ಯೆ ಮಾ[illegible]

ೂಳ್ಳುತ್ತಾರೆ. ಇಲ್ಲವೆ ಕೊಲ್ಲಲ್ಪಡುತ್ತಾರೆಯೆಂದು ಇತ್ತೀಚೆಗೆ ನವ-ದೆಹಲಿಯ ಮಹಿಳಾ ಸಂಘವೊಂದು ಪ್ರಕಟಿಸಿದೆ.

ವರದಕ್ಷಿಣೆಯನ್ನು ತೆಗೆದುಕೊಳ್ಳುವದಾಗಲಿ, ಪ್ರಚೋದಿಸುವದಾಗಲಿ ಅಥವಾ ಪ್ರೋತ್ಸಾಹಿಸುವ ಜಾಹೀರಾತುಗಳಾಗಿರಲಿ; ಅವುಗಳನ್ನು ಸಂಪೂರ್ಣ ನಿಷಿದ್ಧಗೊಳಿಸಿ ೫೦೦ ರೂ. ಗಳಿಂದ ೫,೦೦೦ರೂ. ಗಳವರೆಗೆ ದಂಡ ವಿಧಿಸಲಾಗುವದೆಂಬ ಕಾನೂನು ಜಾರಿಯಲ್ಲಿದೆ. ಆದರೆ ಕಾನೂನುಗಳಿಂದೂ ಭಾರತೀಯ ನಾರಿಗೆ ಪೂರ್ಣರೂಪದ ರಕ್ಷಣೆ ಒದಗಿಲ್ಲ. ಅದಕ್ಕೆ ಬೇಕಾಗುವಷ್ಟು ಶ್ರಮವನ್ನು ಸರಕಾರ ಮತ್ತು ಆಡಳಿತವರ್ಗಗಳು ವಹಿಸಿಲ್ಲ.

ವಿದ್ಯಾಲಯ. ಮಹಾವಿದ್ಯಾಲಯಗಳಲ್ಲಿ ಸ್ವಾವಲಂಬನೆಯ ಪಾಠಗಳನ್ನು ಕ್ರಮಬದ್ಧಗೊಳಿಸಿ. ಮನೆಗಳಲ್ಲಿಯೂ ವರದಕ್ಷಿಣೆಯ ವಿರುದ್ಧ ಪ್ರಚಾರ ಚಳುವಳಿ ಪ್ರಾರಂಭಿಸಬೇಕು. ಅದು ಹಿರಿಯರ ತಲೆ ತುಂಬಿದ ವಿಚಾರಗಳ ಕೊಳೆಯನ್ನು ತೊಳೆಯಲು ಸಹಕರಿಸುತ್ತದೆ. ತಿಂಗಳಿಗೊಮ್ಮೆ ವರದಕ್ಷಿಣೆಯ ವಿರೋಧಿ ದಿನವೆಂದು ಸಾರಬೇಕು. ಪ್ರಚಾರ ನಾಟಕ, ಬೀದಿ ನಾಟಕ, ಪ್ರಚಾರ ಮಾಧ್ಯಮಗಳಲ್ಲೆಲ್ಲ, ಕುಟುಂಬಯೋಜನೆಯ ಪ್ರಚಾರದಂತೆ ಹೊಸ ಹೊಸ ವಿಧಾನಗಳಿಂದ ವರದಕ್ಷಿಣೆಯನ್ನು ವಿರೋಧಿಸಬೇಕು.

ನವೀಕರಿಸಿದ ಹಿಂದೂವಿವಾಹ ಕಾಯ್ದೆಯನ್ವಯ ಪ್ರತಿ ವಿವಾಹಗಳನ್ನು ಸಬ್ ರಜಿಸ್ಟ್ರಾರ ಕಚೇರಿಯಲ್ಲಿ ನೊಂದಾಯಿಸಬೇಕು ದುಂದುವೆಚ್ಚ ನಿಲ್ಲಿಸುವದಕ್ಕಾಗಿ ವಿವಾಹದ ಖರ್ಚನ್ನು ಸೀಮಿತ

ಗೊಳಿಸಬೇಕು. ಇದು ಬಡವರ ಹೆಣ್ಣುಮಕ್ಕಳ ಮದುವೆಗೆ ಅನುಕೂಲ ಮಾಡಿಕೊಡುತ್ತದೆ.

ಹೆಣ್ಣು ಹುಟ್ಟಿದ ಕೂಡಲೇ ಹುಣ್ಣು ಹುಟ್ಟಿದಂತೆಯ ಭಾವನೆಯನ್ನು ಬುಡಸಹಿತ ಕಿತ್ತೆಸೆಯಬೇಕು. ಇಂದು ಗಂಡಸರಿಗಿಂತ ಹೆಂಗಸರು ಹೆಚ್ಚು ಸಮರ್ಥರೀತಿಯಿಂದ ಉತ್ಪಾದನೆಯ ಕ್ಷೇತ್ರದಲ್ಲಿ ತೊಡಗಿ ಆರ್ಥಿಕವಾಗಿ ಆದಾಯ ಪಡೆದು ಮನೆಯನ್ನು ಸಮರ್ಥ ರೀತಿಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ. ಅಂದು ಹೆಣ್ಣು ಹುಟ್ಟಿದಾಗಿನ ಮರುಕದ ಭಾವನೆ, ಇಂದು ಗಂಡು ಹುಟ್ಟಿದಾಗ ಆಗುತ್ತಿರುವ ನಿದರ್ಶನಗಳು ಬೇಕಾದಷ್ಟಿವೆ. ವರದಕ್ಷಿಣೆಯ ಪಿಡುಗಿನಿಂದ ಬಿಡುಗಡೆ ಹೊಂದಲು ಅಂತರ್ಜಾತಿಯ ವಿವಾಹವು ಒಂದು ದಾರಿಯೆಂದು ಈಗಲಾದರೂ ತಿಳಿಯಬೇಕು.

ಅಂತರ್ಜಾತಿ ವಿವಾಹಿತರಿಗೆ ಸರಕಾರವು ಪ್ರೋತ್ಸಾಹನ ಪರವಾಗಿ ನಿವೇಶನವನ್ನೂ ಅಥವಾ ನಿವೇಶನಕ್ಕಾಗಿ ಸ್ಥಳವನ್ನೂ ಒದಗಿಸಬೇಕು. ದಂಪತಿಗಳಿಬ್ಬರಲ್ಲಿ ಒಬ್ಬರಾದರು ವಿದ್ಯಾವಂತರಾಗಿದ್ದರೆ ಸರಕಾರಿ ಹುದ್ದೆ, ಒಡತಿಯ ಅನುಕೂಲ ಮಾಡಿಕೊಡಬೇಕು. ಇಲ್ಲವೆ ಸರ್ಕಾರಿ ಕಾರ್ಖಾನೆಯಲ್ಲಾಗಲಿ ಖಾಸಗೀ ಕಾರಖಾನೆಗಳಲ್ಲಿ, ಆಗಲಿ ಪ್ರಮುಖ ಹುದ್ದೆಯನ್ನು ಕೊಟ್ಟು ಅವರ ಜೀವನಕ್ಕೆ ಅನುಕೂಲ ಕಲ್ಪಿಸಬೇಕು. ಗ್ರಾಮೀಣ ದಂಪತಿಗಳಾಗಿದ್ದರೆ ಕನಿಷ್ಠ ಪಕ್ಷ ೨ ಎಕರೆ ಜಮೀನನ್ನು ಕೊಟ್ಟು ಒಕ್ಕಲುತನವನ್ನು ಸ್ವತಂತ್ರವಾಗಿ ಆರಂಭಿಸಲು ಬಡ್ಡಿರಹಿತ ಸಾಲವನ್ನು ಮಂಜೂರ ಮಾಡಬೇಕು. ಉದ್ಯಮದಲ್ಲಿ ಆಸಕ್ತಿಯುಳ್ಳವರಾಗಿದ್ದರೆ ಉದ್ಯಮಾ

ಆರಂಭಿಸಲು ಸುಲಭ ಕಂತುಗಳಲ್ಲಿ, ಕಡಿಮೆ ಬಡ್ಡಿಯಲ್ಲಿ, ಸಾಲ ಮಂಜೂರಿ ಮಾಡಬೇಕು. ಕೈಗಾರಿಕೆಯಲ್ಲಿ ಆಸಕ್ತರಾಗಿದ್ದರೆ ವಯೋಮಿತಿ ಕಡೆಗಣಿಸಿ ತರಬೇತಿ ಕೊಡಿಸಬೇಕು. ಮಹಿಳೆಯರಿಗೆ ಸಣ್ಣ ಉದ್ಯಮಗಳ ತರಬೇತಿ ಮತ್ತು ಉದ್ಯಮದಾರಂಭದ ಮೂಲಧನ ಒದಗಿಸಲು ಸಾಲ ಮಂಜೂರಿ ಮಾಡಬೇಕು. ದಂಪತಿಗಳು ವಿವಾಹಕ್ಕೆ ಮೊದಲೇ ತರಬೇತಿ ಹೊಂದಿದವರಾಗಿದ್ದರೆ ಕೈಗಾರಿಕಾ ನಿವೇಶನ ಮತ್ತು ಮೂಲಧನವನ್ನು ಸುಲಭವಾಗಿ ಮಂಜೂರಮಾಡಬೇಕು. ಅಂತರ್‌ಜಾತಿ ದಂಪತಿಗಳಲ್ಲಿ ಒಬ್ಬರು ಹಿಂದುಳಿದ ಜಾತಿ ಅಥವಾ ಜನಾಂಗದವರು, ಪರಿಶಿಷ್ಟಜಾತಿಯವರಾಗಿದ್ದರೆ ಈಗ ಜಾರಿಯಲ್ಲಿರುವ ಪರಿಶಿಷ್ಟಜಾತಿ ಮತ್ತು ವರ್ಗದವರಿಗಾಗಿ ಇರುವ ಕಲ್ಯಾಣ ಇಲಾಖೆಯ ಸೌಲಭ್ಯವಾದ ರೂ. ೫೦೦೦-೦೦ ಗಳನ್ನು ನಗದು ಹಣವಾಗಿ ನೀಡಬೇಕು. ಹಾಗೆ ಮಾಡುವಾಗ ಕಾಗದ ಪತ್ರಗಳಲ್ಲಿ ದಂಪತಿಗಳ ತಂದೆ ತಾಯಿಯವರ ಒಪ್ಪಿಗೆ ಪತ್ರಗಳನ್ನು ಸಲ್ಲಿಸಬೇಕೆಂಬ ನಿಯಮವನ್ನು ಪರಿಗಣಿಸಬಾರದು.

ಅಂತರ್‌ಜಾತಿ ವಿವಾಹಿತರಿಗೆ ಬಹುಮಾನ ರೂಪವಾಗಿ ಹಿಂದಿನಂತೆ ಎರಡುಸಾವಿರ ರೂಪಾಯಿಯಾಗಲಿ. ಈಗಿನಂತೆ ಐದುಸಾವಿರ ರೂಪಾಯಿಯಾಗಲಿ ಯಾವುದೇ ರೀತಿಯ ಜೀವನದ ಭದ್ರತೆಯನ್ನು ಒದಗಿಸಲಾರದು. ಅವರಿಗಾಗಿ ನಿವೇಶನಗಳನ್ನು ಕಾಯ್ದಿಡಬೇಕು. ಬೇರೆ ಬೇರೆ ಇಲಾಖೆಯವರಿಗಾಗಿಯೇ ಕ್ವಾಟರ್ಸ್ ಕಟ್ಟಿಸಿಡುವಂತೆ ಅಂತರ್‌ಜಾತಿ ವಿವಾಹಿತರಿಗೂ ನಿವೇಶನಗಳನ್ನು ಸಿದ್ಧಪಾಗಿಡಬೇಕು.

೮. ಜಾತಿಯೆಂಬ ಜಾಡ್ಯದಿಂದ ಬಿಡುಗಡೆ

ನಮ್ಮ ದೇಶದಲ್ಲಿ ಬಂದಿರುವ ಹುಟ್ಟಿನಿಂದ ತಗಲುವ ಜಾತಿಯು ಹಣೆಪಟ್ಟಿಯು ಎಷ್ಟರಮಟ್ಟಿಗೆ ಸಮರ್ಪಕವೆಂದು ತಿಳಿಯಲು ಧಾರ್ಮಿಕ ಇತಿಹಾಸದ ಕಡೆಗೆ ನೋಡಬೇಕಾಗುತ್ತದೆ. ಭಕ್ತಿಪಂಥದ ಆಂದೋಲನದಲ್ಲಿ ತಮಿಳುನಾಡಿನ ಶೈವರು ಅಸಂಖ್ಯ ಶರಣರು ೬೩ ಜನ ಪುರಾತನಯರು. ಹುಟ್ಟಿದ ವೃತ್ತಿ. ಜಾತಿಗಳು ಬೇರೆಯಾಗಿದ್ದರೂ ಶಿವಭಕ್ತರಾಗಿ ಶರಣರಾಗಿ ಶೋಭಿಸಿದ್ದಾರೆ. ತುಕಾರಾಮ ನಾಮದೇವರು ಶೂದ್ರರಾಗಿ ನಂದ ಮತ್ತು ಹರಿದಾಸ ಹರಿಜನರಾಗಿಯೂ ಬ್ರಾಹ್ಮಣರಿಗೆ ತೋರಿಸಲು ಸಾಧ್ಯವಾಗದಂಥ ಉಚ್ಚ. ಉದಾತ್ತ ಗುಣದರ್ಶನದಿಂದ ಶ್ರೇಷ್ಠ ಭಕ್ತರಾಗಿದ್ದಾರೆ. ಇಂದಿನ ಜಾತಿಪದ್ಧತಿಯು ರೂಢಿ ನಿಯಮಗಳಲ್ಲಿ ಮಾತ್ರವಿದ್ದು ಜೀವನದಲ್ಲಿ ತಾತ್ವಿಕವಾಗಿ ಆಡಕವಾಗಿಲ್ಲ. ಅವಕಾಶ ಸಿಕ್ಕರೆ ಶರಣರ ಕಾಲದಲ್ಲಿ ನಡೆದಂತೆ ಅಂತ್ಯಜರು ಕೂಡ ಕುಲಜರೊಂದಿಗೆ ಸರಿದೊರೆಯಾಗಿ ನಿಲ್ಲುವ ಸಾಮರ್ಥ್ಯ ಪಡೆಯುವಂತಾಗುತ್ತಾರೆ. ಕೆಳಜಾತಿಯವರು, ಕೀಳುಸ್ಥಾನದಲ್ಲಿ ಸಮಾಧಾನಪಟ್ಟುಕೊಂಡರೆ ಎಲ್ಲವೂ ಶಾಂತವಾಗಿರುತ್ತದೆ. ಆದರೆ ತಮ್ಮ ಜನ್ಮದ ಮೇಲೆ ಜಾತಿಯನ್ನಂಟಿಸಿದ್ದು ವಿಚಾರಹೀನವೆಂದು ಅವರು ತಿಳಿದಾಗ ಜಾತಿಯನ್ನು ತಿರಸ್ಕರಿಸುವದು ಸ್ವಾಭಾವಿಕ. ಸಮಾಜದಲ್ಲಿ ಆಗ ಶಾಂತಿ ಸೌಹಾರ್ದತೆಗೆ ಭಂಗ ಬರುತ್ತದೆ. ಜಾತಿ ಪದ್ಧತಿ ತನ್ನ

ಯುಜವಾದ ಕಾರ್ಯವನ್ನು ಕಳೆದುಕೊಳ್ಳುತ್ತದೆ. ನಮ್ಮ ದೇಶದ ಂದಿನ ಪರಿಸ್ಥಿತಿ, ಗಲಭೆಗಳಿಗೆ ಇಂಥ ಪರಿಸ್ಥಿತಿಯೇ ಮೂಲ ರಣವಾಗಿರುತ್ತದೆ. ಸ್ವಾತಂತ್ರ್ಯ, ಸಮತೆ ಮೊದಲಾದ ಪ್ರಜಾ ಾಜ್ಯದ ಆದರ್ಶಗಳನ್ನು ಜಾತಿಪದ್ಧತಿ ಮೂಲೆಗೆ ಹಾಕಿರುತ್ತದೆ.

ಜಾತಿ ಪದ್ಧತಿಯು ಮೊದಮೊದಲು ಬೇರೆ ಬೇರೆ ಗುಂಪಿನ ನರನ್ನು ಹೊಂದಿಸಿಕೊಳ್ಳುವಂಥ ಕಾರ್ಯವನ್ನು ಮಾಡಿದೆ ಯಾದರೂ ಮೆಟ್ಟಾಗಿ ಸಮಾಜದ ಏಳ್ಗೆಗೆ ಸಾಕಷ್ಟು ಅವಕಾಶ ೊಟ್ಟಿಲ್ಲ. ಅದಕ್ಕಾಗಿ ಸಮಾಜವು ತನ್ನಲ್ಲಿರುವ ಎಲ್ಲ ಯೋಗ್ಯ ುತ್ತು ಸಮರ್ಥರಾದ ಜನರ ಸಂಪೂರ್ಣ ಉಪಯೋಗಪಡೆದು ೊಳ್ಳಬೇಕು. ಆದರೆ ಜಾತಿ ಪದ್ಧತಿಯಲ್ಲಿ ಹಾಗಾಗುವದಿಲ್ಲ. ಷ್ಟರಮಟ್ಟಿಗೆ ಸಮಾಜದ ಬೆಳವಣಿಗೆ ತಡೆಯಲ್ಪಡುತ್ತದೆ. ಈ ದ್ಧತಿ ಯಾವ ಕಾಲಕ್ಕೂ ಸಮಾಜಕ್ಕೆ ಹಿತಕಾರಿಯಾಗಿಲ್ಲ. ಒಳ ಕ್ಕಾಟಕ್ಕೆ ಅಸ್ಪದಕೊಟ್ಟು ರಾಷ್ಟ್ರದ ಏಳ್ಗೆಗೆ ಆತಂಕ ಒಡ್ಡಿರುತ್ತದೆ.

ಜಾತಿಪದ್ಧತಿಯನ್ನು ಹೋಗಲಾಡಿಸಲು ಅಂತರ್ಜಾತಿ ವಾಹವು ಒಂದು ಮುಖ್ಯವಾದ ಸಾಧನ ರಾಷ್ಟ್ರ-ರಾಜ್ಯ-ಪರಿ ಾರದ ಉನ್ನತಿಗೆ ವಿವಾಹ; ವಿವಾಹದಲ್ಲಿ ದಂಪತಿಗಳ ಮನಸ್ಸು, ುಚಿ ಒಂದಾಗಿ, ಒಡನಾಟ ದೃಷ್ಟಿಕೋನ ಒಂದಾಗಿ ನಡೆಯುವದು ುಖ್ಯವಾಗಿರುತ್ತದೆ. ಜಾತಿಗಿಂತ ಸಂಸ್ಕೃತಿ, ಅಭಿರುಚಿ, ತಿಳು ಳಿಕೆ. ಹೊಂದಾಣಿಕೆಯಿಂದಲೇ ಜೀವನ ಸುಖರೂಪವಾಗಬೇಕಾ ುತ್ತದೆ.

ಸ್ವಜಾತಿ ವಿವಾಹಗಳಲ್ಲಿ ಸೋದರಮಾವ ಸೋದರ ಸೊಸೆಯರೊಳಗೆ. ಅಣ್ಣ–ತಂಗಿಯರ ಮಕ್ಕಳಲ್ಲಿ ನಡೆಯುವ ಸಂಬಂಧಗಳು ವೈಜ್ಞಾನಿಕವಾಗಿ ದೃಷ್ಟಿಯಿಂದಲೂ ಹಿತಕರವಲ್ಲ. ವರದಕ್ಷಿಣೆಯ ಪ್ರಶ್ನೆ ಗಡಚಾಗಲು ಇದು ಮುಖ್ಯಕಾರಣ. ಸ್ವಜಾತಿ ಮದುವೆಯಿಂದ ಒಬ್ಬ ವ್ಯಕ್ತಿಯ ಎಲ್ಲ ಸಂಬಂಧಿಕರೂ ಒಂದೇ ಜಾತಿಯಲ್ಲಿದ್ದು ರಕ್ತಸಂಬಂಧದ ವ್ಯಾಮೋಹ. ಸ್ವಜಾತಿ ಪ್ರೇಮವೂ ಒಂದೇ ಆಗಿ ಅವನು ತನ್ನ ಜಾತಿಯ ಕ್ಷೇಮವನ್ನೇ ಎಲ್ಲಕ್ಕಿಂತ ಹೆಚ್ಚಾಗಿ ಕಾಣುತ್ತಾನೆ. ಇದು ರಾಷ್ಟ್ರೀಯ ಜೀವನದಲ್ಲಿ ನಿಶ್ಚಿತವಾಗಿಯೂ ಆತಂಕವನ್ನೊಡ್ಡುತ್ತದೆ. ಜಾತಿಪದ್ಧತಿಯನ್ನು ಹೋಗಲಾಡಿಸಲು. ಅನ್ಯೋನ್ಯತೆಯನ್ನು ಹೆಚ್ಚಿಸಲು. ರಾಜಕೀಯ ಜೀವನವನ್ನು ಉಚ್ಚಮಟ್ಟಕ್ಕೇರಿಸಲು ಅಂತರ್ಜಾತೀಯ ವಿವಾಹಗಳು ಮುಖ್ಯ ಸಾಧನಗಳು.

ಅಂತರ್ಜಾತಿ ವಿವಾಹಿತ ಮಕ್ಕಳು ಹುಟ್ಟು ಆರೋಗ್ಯವಂತರು ಬುದ್ಧಿವಂತರು ಆಗಿರುತ್ತಾರೆಯೆಂದು ವೈದ್ಯಕೀಯ. ವೈಜ್ಞಾನಿಕ ವರದಿಗಳು ಹೇಳುತ್ತವೆ. ಅಂಗವಿಕಲತೆ. ಬುದ್ಧಿಮಾಂದ್ಯ. ನಾನಾ ರೋಗದ ಮಕ್ಕಳು. ಸಮೀಪ ಸಂಬಂಧಿ. ಸ್ವಜಾತಿ ವಿವಾಹಿತರ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯದೋಷಗಳು. ಬಲಿಷ್ಠರ ಬಲಿಷ್ಠರಾಷ್ಟ್ರ ಕಟ್ಟುವ ಗುರಿಯೆಡೆಗೆ ಲಕ್ಷ್ಯವಿರುವ ನಾಗರಿಕನು. ಸುಸಂಸ್ಕೃತನು. ದೇಶಭಕ್ತನು ಅಂತರ್ಜಾತಿ ವಿವಾಹವನ್ನು ವಿರೋಧಿಸುವ ಹುಚ್ಚುತನವನ್ನು ಮಾಡಲಾರನು. ಮಕ್ಕಳ ಆರೋಗ್ಯ. ಬುದ್ಧಿಮತ್ತೆ. ದೇಶದ ಸಂಪತ್ತು ಎಂದು ತಿಳಿದವರೆಲ್ಲರೂ ಇಂಥ ವಿವಾಹಗಳನ್ನು ಸ್ವಾಗತಿಸುತ್ತಾರೆ. ಸತ್ವಹೀನ ಸಮಾಜವನ್ನು ಒಲ್ಲದ ಸಮರ್ಥರು ಅಂತರ್ಜಾತೀಯ ವಿವಾಹದಿಂದ ಸಂತೋಷಪಡುತ್ತಾರೆ.

ನಮ್ಮ ದೇಶದಲ್ಲಿ ಸುಧಾರಣೆಯು ಬರಬೇಕಾದರೆ ಜನರ ಷ್ಟಿಕೋನ ಬದಲಾಗಬೇಕು. ಉದಾತ್ತ ಧ್ಯೇಯವನ್ನು ಇಟ್ಟು ಳ್ಳದ ಯಾವದೇ ಬದಲಾವಣೆ ಪೂರ್ವ ಪರಿಸ್ಥಿತಿಯು ಹೊಸ ಪವನ್ನೇ ಸೂಚಿಸುತ್ತದೆ.

ಶಾಲೆಯಲ್ಲಿ ಮಕ್ಕಳಿಗೆ ಕಲಿಸಲಾಗುವ ಅಕ್ಷರಜ್ಞಾನ. ತಿಹಾಸ–ಭೂಗೋಲ ಜ್ಞಾನವಷ್ಟೇ ಸಮಾಜದಲ್ಲಿ ಬಾಳುವ ಯೋಗ್ಯತೆಯನ್ನು ಕಲಿಸುವದು ಮುಖ್ಯವಾಗಿದೆ. ಪ್ರಾಥಮಿಕ ಂತದಲ್ಲಿ ವಸ್ತುಜ್ಞಾನ ಮಾತ್ರ ಅವಶ್ಯ. ಮಗುವಿನ ಮಾನಸಿಕ ಳವಣಿಗೆ ನಡೆದ ಹಂತದಲ್ಲಿ ಅವನಿಗೆ ದೇಶ–ಸಮಾಜಗಳ ಉಳಿವು ಳಿವುಗಳನ್ನು ತಿಳಿಯಪಡಿಸುವದು ಅತ್ಯವಶ್ಯ. ಹತ್ತುವರ್ಷ ಾಟಿದ ಬಾಲಕ ಅಥವಾ ಬಾಲಕಿ ಹದಿನಾರುವರ್ಷ ತಲುಪುವವರೆಗೆ ೃಹಿಕ ಬೆಳವಣಿಗೆಯು ಜೊತೆಗೆ ಮಾನಸಿಕವಾಗಿ ಜೀವನದ ಸಿದ್ಧತೆ ಯನ್ನು ಮಾಡಿಕೊಳ್ಳುವಂತಾಗಬೇಕು. ಆಗ ಸಾಮಾಜಿಕ ಕಟ್ಟು ಪಾಡುಗಳು ಹೇಗೆ ಮತ್ತು ಏತಕ್ಕಾಗಿ ಎಂದು ಚಿಂತಿಸಬೇಕಾಗುತ್ತದೆ. ವರ್ಣ. ಜಾತಿ–ಮದುವೆಗಳ ಬಗೆಗೆ ಸರಿಯಾದ ಅರ್ಥವಿವರಣೆ ಳಿಯುವಂತಾದರೆ ಅತ್ತಕಡೆಗೆ ವಿಚಾರ ಮಾಡುವ ಶಕ್ತಿ ತಾನಾಗಿ ಳೆಯುತ್ತದೆ. ಮದುವೆಗೆ ಬೇಕಾಗುವ, ಇರಬೇಕಾದ ಸಂಗಾತಿ ಳು, ಗುಣದೋಷ ತಿಳಿದು ಹೊಂದಿಕೊಳ್ಳುವ ಬಗೆ, ಜೀವನ ಡೆಸಲು ಅವಶ್ಯಕವಾಗಿ ಬೇಕಾಗುವ ಸಂಗತಿಗಳು–ಈ ಎಲ್ಲದರ ಗೆಗೆ ಜ್ಞಾನವಾಗುವಂತೆ ಪಠ್ಯಕ್ರಮವನ್ನು ರೂಪಿಸಿ, ಇತರ ಪಾಠ ಳಂತೆ ಇದನ್ನು ಬೋಧಿಸಬೇಕು. ಜಾತಿಯ ಅರ್ಥ ತಿಳಿದಮೇಲೆ ಂಧಾನುಕರಣೆ, ಅರ್ಥರಹಿತ ಆಚರಣೆಗೆ ತಡೆಯುವಂತಾಗುತ್ತದೆ.

ಮೇಲು ಕೀಳು ಜಾತಿಯೆಂಬ ತಪ್ಪುಗ್ರಹಿಕೆ ಇಲ್ಲವಾಗುತ್ತದೆ. ಶ್ರೇಷ್ಠಜ–ಕನಿಷ್ಠಜಯೆಂಬ ಭೇದ ಅಳಿಯುತ್ತದೆ.

ಮನುಷ್ಯನಿಗೆ ಸಾವು ನಿಶ್ಚಿತವೆಂಬಂತೆ ನಮ್ಮ ದೇಶದಲ್ಲಿ ಹಿಂದು ಸಮಾಜದಲ್ಲಿ ಮದುವೆಯೆಂಬುದು ಬಹುಪಾಲು ಖಚಿತ. ಇಂಥ ವಿಷಯದ ಬಗೆಗೆ ಅಜ್ಞರಾದ ಯುವಕ ಯುವತಿಯರು ಮೋಸ ಹೋಗದೆ ಮುನ್ನಡೆಯಬೇಕಾಗುತ್ತದೆ. ಮದುವೆಯ ಅವಶ್ಯಕತೆಯೆಷ್ಟು, ಯಾರಿಗೆ, ಹೇಗೆ, ಎಂಬುದನ್ನು ತಿಳಿದರೆ ದುರ್ಬಲರು ಮದುವೆಯಾಗಿ ಮತ್ತೊಬ್ಬರನ್ನು ಹಿಂಸೆಗೊಳಗುಮಾಡಿ ಶೋಷಿಸುವುದು ತಾನೇ ತಪ್ಪಿಹೋಗುತ್ತದೆ. ನಮ್ಮ ದೇಶದಲ್ಲಿ ಒಮ್ಮೆ ಮದುವೆಯಾದರೆ ಜೀವನವಿಡಿ ಬದ್ಧರಾಗಿರಬೇಕಾದ ಪದ್ಧತಿಯಲ್ಲಿ ಅದರ ಅರ್ಥವೇ ತಿಳಿಯದೇ ಕನಸು ಕಾಣುವುದು ನಿಲ್ಲಬೇಕಾದರೆ ಸರಿಯಾದ ತಿಳುವಳಿಕೆ ಬೇಕೇ ಬೇಕು. ಜೀವನಾವಶ್ಯಕ ಶಿಕ್ಷಣದಲ್ಲಿ ಜೀವನಾವಶ್ಯಕ ವಿಷಯಗಳ ಜೊತೆ ಕಡ್ಡಾಯವಾಗಿ ಬರಬೇಕು. ನಾಗರಿಕತೆಯ ಕುರುಹಾಗಿ ಬಂದ ವಿವಾಹದಲ್ಲಿ ಅಡಗಿರುವ ಗುಟ್ಟುಗಳನ್ನು ಮುಂದಾಲೋಚಿಸಿ ನಿರ್ಣಯಿಸುವ ವೈಚಾರಿಕ ಒನ್ನಲಿ ಕೊಡುವುದು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಸೂಕ್ತ.

ಮದುವೆಯೆಂಬುದು ಸ್ವರ್ಗದಲ್ಲಿಯೇ ನಿರ್ಣಯಿಸಲ್ಪಟ್ಟಿರುತ್ತದೆಯೆಂಬ ನಂಬಿಗೆಯ ಹಿಂದೆ ಮುಗ್ಧರಾಗಿ, ಅಜ್ಞರಾಗಿ ನಡೆಯುವ ಅಗತ್ಯವಿಲ್ಲ. ಜೀವನ ಸಂಗಾತಿಗಳಾಗಿ ಬಾಳಬೇಕಾದವರು ಹೇಗೆ ಇರಬೇಕು, ಗುಣ ಸ್ವಭಾವಗಳನ್ನು ಅರಿತು ಹೊಂದಿಬಾಳುವುದು ಹೇಗೆಂದು ಮೊದಲಾಗಿ ಚಿಂತಿಸಬೇಕು. ಇಂದ್ರಿಯಗಳು

ಪ್ರಾಣಬಿಟ್ಟರು. ಆಕರ್ಷಣೆಯೇ ಪ್ರಮುಖ ಸೇತುವಾಗಿ ದಾಟಿ
ಪ್ಪುವ ಯುವ ವಯಸ್ಸಿಗೆ ಮೊದಲು ಪರಿಚಯದಲ್ಲಿ ಮದುವೆ
ಗೆ ತೀರ್ಮಾನಕ್ಕೆ ಅವಶ್ಯ.

ಅಂತರ್ಜಾತಿ ವಿವಾಹಿತರ ಮಕ್ಕಳ ಮದುವೆಯ ಸಮಸ್ಯೆ
ನ್ನು ಮುಂದೆ ಮಾಡಿ ಆಕ್ಷೇಪಿಸುವವರು ಇದ್ದಾರೆ. ಆಡಿಕೊಳ್ಳುವ
ರು ಇದ್ದಾರೆ. ಆಗುವ ಮದುವೆಗಳನ್ನು ಆಗಿಸದಂತೆ ಹಿಂದೆ
ಗ್ಗುವವರೂ ಇದ್ದಾರೆ. ಹರಿಯುವ ನದಿಗೆ ಒಡ್ಡು ಹಾಕಿ
ಕಾದತ್ತ ತಿರುಗಿಸಲು, ಪರ್ವತಾಳಿಗಳ ಒಡಲು ಬಗೆದಿಡಲು
ಮರ್ಥವಾಗಿರುವ ಮಾನವಶಕ್ತಿಯೆದುರು ಜಾತಿಯ ಸಮಸ್ಯೆ
ಷ್ಟವಾಗುತ್ತದೆ. ಆಗಸವನ್ನು ಅಳೆಯಬಲ್ಲ ಬುದ್ಧಿಶಕ್ತಿಯ
ದುರು ಮದುವೆಯ ಯೋಜನೆ ಕೈಗೆಟುಕದಂತಾಗಿದೆ.

ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಲು ಸೊಲ್ಲಾ
ರದಲ್ಲಿ ಶರಣ ಸಮಾಜವೆಂಬ ಸಂಘ ಸ್ಥಾಪಿಸಿದ್ದಾರೆ. ವರ್ಷ
ಕ್ಕೊಮ್ಮೆ ಅಂತರ್ಜಾತಿ ವಿವಾಹಿತರನ್ನು ಆಮಂತ್ರಿಸಿ ಪರಿಚಯಿಸು
ರೆ. ಸತ್ಕರಿಸುತ್ತಾರೆ. ಸಮಸ್ಯೆಗಳನ್ನು ಎಲ್ಲರೂ ಸೇರಿ ಚರ್ಚಿಸು
ರೆ. ಅಡ್ಡಿ ಆತಂಕಗಳನ್ನೆದುರಿಸಿ ಧೈರ್ಯದಿಂದಿರಲು ಪ್ರೋತ್ಸಾ
ಸುತ್ತಾರೆ. ಒಬ್ಬರಿಗೊಬ್ಬರು ಸಹಕರಿಸುತ್ತಾರೆ. ಹೀಗೆ ಒಂದೆಡೆ
ರುವುದರಿಂದ ಅವರವರ ಸಮಸ್ಯೆಗಳಿಗೆ ಕೆಲಮಟ್ಟಿಗಾದರೂ
ಹಾರ ದೊರೆತು, ಜೀವನವನ್ನೆದುರಿಸುವ ನವಶಕ್ತಿಯುಂಟಾಗಿ
ಮನಸ್ಸಿನಲ್ಲಿ ಉತ್ಸಾಹ ಉಂಟಾಗುತ್ತದೆ. ಬಸವ ಗಾಂಧೀಜಿಯ
ರು ಹೇಳಿರುವಂತೆ, ಮನವರಿತು ಹೆಣ್ಣು–ಗಂಡು ಕೂಡುವುದೇ
ದುವೆ, ಉಳಿದ ಸಾಧನ ಸಲಕರಣೆಗಳು ಗೌಣವೆಂಬರ್ಥ ಇಂಥ
ಸಂಗಗಳಿಂದ ಸ್ಪಷ್ಟವಾಗುತ್ತದೆ.

ತರಗ ಸಮಾಜದಂಥ ಸಂಘಗಳು ಸ್ವತಂತ್ರವಾಗಿ ಹಳ್ಳಿಗೊಂದು ಪಕ್ಕಗೊಂದು ಹುಟ್ಟಿದರೂ ಅವುಗಳ ಹುಟ್ಟಡಗಿಸಲು ಕಂಕಣಬದ್ಧರಾದ ಅನೇಕ ಹಿರಿಯರೂ ಇರುತ್ತಾರೆ. ಹಾಗಾಗದಿರಲು ಕೇಂದ್ರ ಸರಕಾರ ರಾಜ್ಯಸರಕಾರಗಳು ಸೇರಿ ಬೃಹತ್ ಯೋಜನೆಯನ್ನು ಕೈಕೊಂಡು ಕಾರ್ಯಪ್ರವೃತ್ತರಾಗಿ ವರ್ಷಕ್ಕೊ-ಮ್ಮೆಯಾದರೂ ಸಮ್ಮೇಲನ ಮಾಡಬೇಕು. ಕುಂದುಕೊರತೆಗಳನ್ನು ಕೇಳಬೇಕು. ಅಂತರ್ಜಾತಿಯ ವಿವಾಹಿತರ ಬೆನ್ನುಬಿದ್ದ ದುಷ್ಟಶಕ್ತಿಗಳನ್ನು ಗುರುತಿಸಿ ನಿವಾರಿಸುವ ಪ್ರಯತ್ನದಲ್ಲಿ ಸಹಕಾರ ಕೊಡಬೇಕು. ಭೌಗೋಲಿಕವಾಗಿ ದೇಶದ ಅಭಿವೃದ್ಧಿಗೆ ಪೂರಕವಾಗುವ ಯೋಜನೆಗಳನ್ನು ರೂಪಿಸುವಂತೆ ಸಾಂಸ್ಕೃತಿಕವಾಗಿ ಸಮಾನತೆಯನ್ನು ಬೆಳೆಸುವ. ಮೇಲು–ಕೀಳಿನ ಭಾವವಳಿದು ಎಲ್ಲರೂ ಮುಂದಾಗುವಂಥ ಸಾಮಾಜಿಕ ಬದಲಾವಣೆ ತರುವ ಯೋಜನೆಗಳನ್ನು ರೂಪಿಸಿ ದೇಶದಲ್ಲಿ ಸಾಂಸ್ಕೃತಿಕ ಕ್ರಾಂತಿಯನ್ನು ತರಬೇಕು. ಒಬ್ಬೊಬ್ಬರಿಗೆ ಒಂದೊಂದು ದಾರಿ ತೋರಿಸುವ ಸಾವಿರಾರು ಜಾತಿಯ ಲಕ್ಷಾನುಗಟ್ಟಲೆ "ಗುಡಿಗಳನ್ನು ನೆಲಸಮ ಮಾಡಿದಾಗಲೇ ದೇಶದ ಉದ್ಧಾರವಾಗುತ್ತದೆ"ಯೆಂಬ ನಂಬಿಗೆ ಸುಳ್ಳಾಗುವಂತೆ ನಮ್ಮ ಸರಕಾರವು ಜಾತಿ–ವಿವಾಹ ಪದ್ಧತಿಗಳಲ್ಲಿ ಹೊಂದಾಣಿಕೆಯನ್ನು ಕಲ್ಪಿಸಲು ತಜ್ಞರನ್ನು ನಿಯಮಿಸಿ ಏಕರೂಪ ತತ್ವಗಳನ್ನು ಜಾರಿಯಲ್ಲಿ ತರಬೇಕು.

ರಾಷ್ಟ್ರೀಯ ಜೀವನಕ್ಕೆ ಅಡ್ಡಿಯುಂಟಾಗದಂತೆ ಜಾತಿ ಮತ್ತು ವಿವಾಹ ಪದ್ಧತಿಗಳ ಬಗೆಗೆ ಏಕರೂಪ ಕಾನೂನನ್ನು ಜಾರಿಯಲ್ಲಿ ತರಬೇಕು. ಇದು ಜನಸಂಖ್ಯಾ ನಿಯಂತ್ರಣಕ್ಕೂ ಅನುಕೂಲಕರ.

ನೇಕ ಪತ್ನಿತ್ವ—ಅನೇಕ ಸಂತಾನ ಪದ್ಧತಿಗಳಿಗೆ ತಡೆಹಾಕಬೇಕಾದರೆ ರಕಾರದ ನಿಯಂತ್ರಣದಿಂದಲೇ ಸಾಧ್ಯ. ಒಂದೇ ಕಡೆಗೆ ಕೂಡಿ ಳುತ್ತಿರುವ ನಾಗರಿಕರಲ್ಲಿ ಜಾತಿಯ ಆಧಾರದ ಮೇಲೆ ಸರಕಾ ದೇ ಸೌಲಭ್ಯಗಳನ್ನು ಕಲ್ಪಿಸುವ ಬದಲು ವ್ಯತ್ಯಾಸವನ್ನು ಸೃಷ್ಟಿಸು ದು ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಹಚ್ಚಿ ಂತಾಗುತ್ತದೆ.

ಧಾರ್ಮಿಕ ಪದ್ಧತಿಯ ಮದುವೆ, ನೋಂದಣಿ ಮದುವೆ ರಡೂ ಪದ್ಧತಿಗಳು ಜಾರಿಯಲ್ಲಿರುವಾಗ ಕೆಲವರು ಎರಡೂ ತಿಯ ಮದುವೆಗಳನ್ನಾಗಿಯೂ ಸುಖವಾಗಿ ಬಾಳುತ್ತಾರೆ. ನೂನಿನ ಹಿಡಿತಕ್ಕೆ ಸಿಗದಂತೆ ಉಳಿಯುತ್ತಾರೆ. ಕಾನೂನು ಹಿರವಾಗಿದ್ದರೂ ಧಾರ್ಮಿಕ ಮದುವೆ ಅಂಥ ಅನುವು ಮಾಡಿ ಡುತ್ತದೆ. ಹೀಗೆ ಆಗದಂತೆ ಎರಡೂ ಪದ್ಧತಿಗಳನ್ನು ಮೇಳೈಸ ಕು. ಧಾರ್ಮಿಕ ವಿವಾಹವಾದ ಮೇಲ ತಾವೇಕೆ ನೋಂದಣಿ ಾಡಿಸಬೇಕೆಂಬ ತಿಳುವಳಿಕೆಯಿಂದ ಹಾಗೆ ಮಾಡಬೇಕೆಂಬ ನೂನನ್ನು ಬಹಳ ಜನ ಉಲ್ಲಂಘಿಸುತ್ತಾರೆ. ಹಾಗೆ ಆಗದಂತೆ ಾರ್ಮಿಕ ಮದುವೆಯನ್ನು ಮಾಡಿಸುವ ಧರ್ಮಗುರು, ಧರ್ಮಾ ಕಾರಿಗಳನ್ನು ಅವರು ಮಾಡಿಸಿದ ಮದುವೆಗೆ ದಾಖಲೆ ಇಟ್ಟು ವರೂ ಕೂಡ ನೋಂದಣಿ ಕಚೇರಿಗೆ ತಿಳಿಸುವ ಜವಾಬ್ದಾರಿ ೂರುವಂತೆ ಕಟ್ಟಳೆಯನ್ನು ಮಾಡಬೇಕು. ಜನನ-ಮರಣ ಖಲೆಯಂತೆ ವಿವಾಹದ ದಾಖಲೆಗಳು ಸರ್ವವಿದಿತ, ಹತ್ವದ ದಾಖಲೆಯಾಗಬೇಕಾದರೆ ಅವಶ್ಯಕ ಕ್ರಮಗಳನ್ನು ನುಸರಿಸಬೇಕು. ಅದರಿಂದ ಅಂತರ್ಜಾತಿ ವಿವಾಹಿತ ಮಹಿಳೆ

ಯರಿಗೆ ಅವರ ಗಂಡಂದಿರು ಮತ್ತೊಂದು ಸ್ವಜಾತಿ ಮದುವೆ ಮಾಡಿಕೊಳ್ಳುವ ಅಂಜಿಕೆ, ಘಟನೆ ತಪ್ಪುತ್ತದೆ. ಆಗ ಸರಕಾರವು ಅಂತರ್ಜಾತಿ ವಿವಾಹಿತರನ್ನು ಪ್ರೋತ್ಸಾಹಿಸಿದಂತಾಗುತ್ತದೆ.

ಧರ್ಮ ಮತ್ತು ಜಾತಿಯ ಮೂಲ, ಬೆಳವಿಗೆಗಳು ಬೇರೆಯೇ ಇದ್ದರೂ ಬೇರೆ ಬೇರೆ ಧರ್ಮಗಳ ವಧು-ವರರ ನಡುವೆ ನಡೆದ ಮದುವೆಯನ್ನು ಕೂಡ ಅಂತರ್ಜಾತಿ ವಿವಾಹ ವೆಂದೇ ಕರೆಯುವ ರೂಢಿ. ಬೇರೆ ಧರ್ಮದವರಿಬ್ಬರು ಒಂದು ತಿಳುವಳಿಕೆಗೆ ಬರಲು ಅವರವರ ಸಂಸ್ಕೃತಿ, ಆಚಾರ-ವಿಚಾರ ಭೇದ, ಅಭಿರುಚಿ ಭಿನ್ನತೆ ಹೆಚ್ಚಿದರೂ ಕೂಡ ಅಂಥ ಮದುವೆಗಳೂ ಕೂಡ ನಡೆದಿರುತ್ತವೆ, ಸಫಲವಾಗಿರುತ್ತವೆ.

ಮನುಷ್ಯನು ಸಂಘಜೀವಿ, ಸಮಾಜದಲ್ಲಿಯೇ ಬದುಕಬೇಕು. ಅವನು ತನ್ನ ಅಳಿವು-ಉಳಿವು, ಉದರಂಭರಣೆಗಳಂಥ ದೈನಂದಿನ ಕ್ರಿಯೆಗಳಿಗಾಗಿ ಪರಾವಲಂಬಿಯಾಗುತ್ತಾನೆ. ಸಮಾಜ ವ್ಯವಸ್ಥೆ ವ್ಯವಸ್ಥಿತವಾಗಿರಬೇಕಾದರೆ ಸಮಾಜದ ಪ್ರಮುಖ ಅಂಗವಾದ ವ್ಯಕ್ತಿಗೆ ಕೆಲವೊಂದು ಕಟ್ಟುಪಾಡುಗಳನ್ನು, ನೀತಿ-ವಿಧಾನಗಳನ್ನು ಅವನ ಇಚ್ಛೆಗೆ ವಿರೋಧವಾಗಿಯಾದರೂ ಅನುಸರಿಸಬೇಕಾಗು ವದು ಅನಿವಾರ್ಯ. ಆದರೆ ಅಂಥ ನಿಯಮಗಳು ರೂಪಿಸಲ್ಪಟ್ಟ ಕಾಲಮಾನದ ಪ್ರಜ್ಞೆಯನ್ನು ತೊರೆದು ಎಲ್ಲ ಕಾಲಕ್ಕೆ ಒಂದೇ ಸತ್ಯ ವೆಂದು ಗ್ರಹಿಸಲಾಗದು. ಅಂತೆಯೇ ಜಾತಿ-ಅಂತರ್ಜಾತಿ ವಿವಾಹ ವೆಂಬ ಎರಡೂ ಪದ್ಧತಿಗಳನ್ನು ತಮತಮಗೆ ತಿಳಿದಂತೆ ವ್ಯಾಖ್ಯಾ ನಿಸುವಬದಲು ಇಂದಿನ ಪರಿಸ್ಥಿತಿಗನುಸರಿಸಿ ಖಚಿತ ರೂಪ ಕೊಡುವ

ಪ್ರಯತ್ನ ನಡೆಯಬೇಕು. ಇಲ್ಲದೇ ಹೋದರೆ ಹಿಂದಿನ ನಿಯಮಗಳನ್ನೇ ಗಟ್ಟಿಯಾಗಿ ನಂಬಿದವರು ಹೊಸ ವಿಧಾನಗಳಿಗೆ ಸಿಡಿದೆದ್ದು ಸೇಡು ತೀರಿಸಿಕೊಳ್ಳಲು ಅಣಿಯಾಗುತ್ತಾರೆ.

ಸರಕಾರವು ಅಂತರ್ಜಾತಿ ವಿವಾಹಿತರಿಗೆ ಕೊಡಮಾಡುವ ಸೌಲಭ್ಯಗಳನ್ನು ಹೆಚ್ಚಿಸಿದರೆ ಹೆಚ್ಚಾಗಿ ನೌಕರಿಗಳನ್ನು ಕೊಡುವುದರಿಂದ ಅದಕ್ಕಾಗಿ ನಡೆಸುವ ಭ್ರಷ್ಟಾಚಾರ ತಪ್ಪುತ್ತದೆ. ವರದಕ್ಷಿಣೆಯ ಪಿಡುಗು ದೂರವಾಗುತ್ತದೆ. ಸಮಾಜದಲ್ಲಿ ಹಬ್ಬುವ ಕೆಲವು ವಿಷಫಲಗಳಾದರೂ ನಾಶವಾಗುತ್ತವೆ. ಸದೃಢ ಸದ್ಬುದ್ಧಿವಂತ ಜನಾಂಗ ಸೃಷ್ಟಿಸಲು ಅನುವುಮಾಡಿಕೊಟ್ಟು, ಹೊಸ ವೈಚಾರಿಕತೆಗೆ, ಹೊಸ ಮನ್ವಂತರಕ್ಕೆ ಹೊಸ ಆಯಾಮ ಕೊಟ್ಟಂತಾಗುತ್ತದೆ. ಜಾತೀಯ ವೈಷಮ್ಯಗಳನ್ನು ಹೋಗಲಾಡಿಸಿದಂತಾಗುತ್ತದೆ. ಅದು ಸಾಮಾಜಿಕರ ಮನಃಪರಿವರ್ತನೆಯನ್ನು ತಂದು ಸಾಂಸ್ಕೃತಿಕ ಕ್ರಾಂತಿಯಾಗಿ ಹಿತಕರ ವಾತಾವರಣಕ್ಕೆ ಹಾದಿ ಮಾಡಿ ಕೊಡುತ್ತದೆ.

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ಕವಿ ಕರ್ಮಯೋಗಿ ದಿನಕರ ದೇಸಾಯಿ
—ವಿಷ್ಣು ನಾಯಕ

೨ ನಮ್ಮ ಶಿಕ್ಷಣ—ನಮ್ಮ ಸಂಸ್ಕೃತಿ
—ವ್ಹಿ. ಜಿ. ಮಾರೀಹಾಳ

೩ ಮೀನುಗಾರಿಕೆಯ ಪ್ರಾಚೀನತೆ
—ಎನ್. ಕೆ. ಕಡೆತೋಟದ

೪ ಭಾರತದಲ್ಲಿ ತೆರಿಗೆ ಮತ್ತು ಕಪ್ಪುಹಣದ ಪಾತ್ರ
—ಎಸ್. ಎನ್. ನಾಯಕ

೫ ಪುಣ್ಯಕೋಟಿ ಒಂದು ಸಾಂಸ್ಕೃತಿಕ ಅಧ್ಯಯನ
—ಮಹೇಶ ತಿಪ್ಪಶೆಟ್ಟಿ

೬ ಮಕ್ಕಳಲ್ಲಿ ಪ್ರಚಲಿತವಾದ ಮೂಢನಂಬಿಕೆಗಳು
—ಎಲ್. ಆರ್. ಹೆಗಡೆ

೭ ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ
—ಎಂ. ಎನ್. ಪ್ರಭು

೮ ಭಾರತದಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆ
—ಟಿ. ಸೋಮಶೇಖರ

೯ ವೇದಕಾಲದ ವಿವಾಹಗಳು
—ವಿದ್ವಾನ್ ಸಾಂಬದೀಕ್ಷಿತ

೧೦ ಕನ್ನಡ ಜನಪದ ಸಾಹಿತ್ಯದಲ್ಲಿ ಮದುವೆ
—ಎಲ್. ಆರ್. ಹೆಗಡೆ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ